# ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 ಸಂಚಿಕೆ 4 ಜನವರಿ 27, 1980 40 ಪೈಸೆ

## ವಿಧಾನ ಮಂಡಲದಲ್ಲಿ ರಾಜ್ಯಪಾಲರ ಭಾಷಣ

ಬೆಂಗಳೂರಿನ ಕನ್ನಡ ದೈನಿಕವೊಂದು ಹೊಸ ಸಚಿವಸಂಪುಟದ ಮೂರು ವಿಕ್ರಮಗಳನ್ನು ವರದಿ ಮಾಡುತ್ತಾ ದಿನಾಂಕ 23 ರಂದು ವಿಧಾನ ಮಂಡಲದ ಉಭಯ ಸದನಗಳ ಜಂಟಿ ಅಧಿವೇಶನದಲ್ಲಿ ರಾಜ್ಯಪಾಲರು ಮಾಡಿದ ಭಾಷಣ ತುಂಬಾ ಚಿಕ್ಕದು ಎಂದಿದೆ. ಇಂತಹ ಜಂಟಿ ಅಧಿವೇಶನದಲ್ಲಿ ರಾಜ್ಯಪಾಲರು ಓದುವ ಭಾಷಣವು ಸಚಿವ ಸಂಪುಟ ಮೊದಲೇ ಸಿದ್ಧಪಡಿಸಿದ ಭಾಷಣ. ಈ ಸಂದರ್ಭದಲ್ಲಿ ಅದನ್ನು ಓದುವ ಕೆಲಸ ಮಾತ್ರ ರಾಜ್ಯಪಾಲರಿಗೆ. ಈ ಭಾಷಣದಲ್ಲಿ ಸ್ಥೂಲವಾಗಿ ಸರ್ಕಾರದ ಧೋರಣೆಯನ್ನು ಸೂಚಿಸಲಾಗುವುದು. ಸಾಮಾನ್ಯವಾಗಿ ಇಂತಹ ಭಾಷಣಗಳಲ್ಲಿ ಇರಬೇಕಾದ ಹಾಗೂ ಇರುವ ಆಶ್ವಾಸನೆಗಳು ಈ ಭಾಷಣದಲ್ಲೂ ಇವೆ.

ಇಪ್ಪತ್ತು ಅಂಶಗಳ ಕಾರ್ಯಕ್ರಮವನ್ನು ಇನ್ನೂ ಹೆಚ್ಚು ಭರದಿಂದ ಅನುಷ್ಠಾನಕ್ಕೆ ತರುವುದಾಗಿ ಹೇಳಿರುವುದನ್ನು ವಿಚಾರ ಮಾಡುವಾಗ ಮುಷ್ಕರ ನಿಷೇಧವೂ ಸಹ ಇಪ್ಪತ್ತರಲ್ಲಿ ಒಂದು ಅಂಶ ಎಂಬುದನ್ನು ಸ್ಮರಿಸಬೇಕಾದುದು ಅಗತ್ಯ.

ಈ ಭಾಷಣವನ್ನು ಸಿದ್ಧಪಡಿಸಿದ ಸಚಿವ ಸಂಪುಟದ ಬಲ ಕೇವಲ ಮೂರು. (ಕೆಲವು ತಿಂಗಳ ಹಿಂದೆ ವಾಸುದೇವನ್ ನಾಯರ್ ಸರ್ಕಾರ ರಾಜೀ

### ಸಂಪಾದಕೀಯ

ನಾಮೆ ಇತ್ತ ನಂತರ ಕೇರಳದಲ್ಲಿ ಅಸ್ತಿತ್ವಕ್ಕೆ ಬಂದ ಸಿ. ಹೆಚ್. ಮಹಮ್ಮದ್ ಕೋಯಾ ಮಂತ್ರಿಮಂಡಲದ ಸದಸ್ಯ ಬಲವೂ ಮೂರೇ ಆಗಿದ್ದಿತು!). ಸಚಿವ ಸಂಪುಟದ ವಿಸ್ತರಣೆಯ ಪ್ರಶ್ನೆ ಕಾಂಗ್ರೆಸ್ (ಐ) ಪಕ್ಷದಲ್ಲಿ ಇನ್ನೂ ಜಟಿಲವಾಗಿಯೇ ಉಳಿದಿದೆ. ಸಚಿವ ಸಂಪುಟವನ್ನು ವಿಸ್ತರಿಸುವಾಗ ಕಾಂಗ್ರೆಸ್ (ಯು) ಮತ್ತು ಜನತಾಪಕ್ಷಗಳಿಂದ ಕಾಂಗ್ರೆಸ್ (ಐ)ಗೆ ವಲಸೆ ಬಂದ ಪಕ್ಷಾಂತರಿಗಳಿಗೆ ಪ್ರಾತಿನಿಧ್ಯ ಇರಬೇಕೇ ಬೇಡವೇ ಎಂಬುದರ ಬಗ್ಗೆ ಕಾಂಗ್ರೆಸ್ (ಐ) ಪಕ್ಷದೊಳಗೆ ಪ್ರಬಲವಾದ ವಿವಾದವಿದೆ. ಈ ಪಕ್ಷಾಂತರಿಗಳ ಸಹಾಯವಿಲ್ಲದಿದ್ದರೆ ಕಾಂಗ್ರೆಸ್ (ಐ) ಪಕ್ಷಕ್ಕೆ ಸರ್ಕಾರ ರಚಿಸಲು ಸಾಧ್ಯವಿರಲಿಲ್ಲ ಎನ್ನುವಾಗ ಅವರಿಗೆ ಪ್ರಾತಿನಿಧ್ಯವನ್ನು ನಿರಾಕರಿಸುವುದು ಅಷ್ಟು ಹಗುರವಾದ ವಿಷಯವೇನಲ್ಲ. ಆದರೆ ಈ ಪಕ್ಷದ ಹಲವಾರು ಜಿಲ್ಲಾ ಸಮಿತಿಗಳು ವಿಧಾನಸಭೆಯನ್ನು ವಿಸರ್ಜಿಸಿ ಮಧ್ಯಂತರ ಚುನಾವಣೆಯನ್ನು ನಡೆಸಬೇಕು, ಪಕ್ಷಾಂತರಿಗಳನ್ನು ದೂರವಿಡಬೇಕು ಎಂದು ಕೇಳುವ ಗೊತ್ತುವಳಿಗಳನ್ನು ಅಂಗೀಕರಿಸಿ ಪಕ್ಷದ ವರಿಷ್ಠ ಮಂಡಳಿಗಳಿಗೆ

[ಕಡೆಯ ಪುಟ ನೋಡಿ]

## ಕೇರಳದ ಜನತೆಗೆ ಕೆಂಪು ವಂದನೆಗಳು

ವಿಳನೇ ವಿಧಾನಸಭಾ ಚುನಾವಣೆಗಳಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕರಂಗ ಅಭ್ಯರ್ಥಿಗಳಿಗೆ ಭಾರೀ ಬಹುಮತವನ್ನು ತಂದುಕೊಟ್ಟ ಕೇರಳದ ಜನತೆಯನ್ನು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯಸಮಿತಿಯ ಪರವಾಗಿ ಪಕ್ಷದ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್ ಅಭಿನಂದಿಸಿದ್ದಾರೆ.

ಇಂದಿರಾ ಗಾಳಿಯನ್ನು ಯಶಸ್ವಿಯಾಗಿ ತಡೆದು ಸರ್ವಾಧಿಕಾರಿ ಶಕ್ತಿಗಳಿಗೆ ಪೆಟ್ಟುಕೊಟ್ಟಿರುವ ಕೇರಳದ ಜನತೆಯಿಂದ ದೇಶದ ಉಳಿದ ಭಾಗದ ಜನತೆ ಸ್ಫೂರ್ತಿ ಪಡೆಯಲಿ ಎಂದಿದ್ದಾರೆ. ಕೇರಳ ರಾಜ್ಯದ ಮಾದರಿಯಲ್ಲಿ ಕರ್ನಾಟಕದಲ್ಲಿಯೂ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಪರಸ್ಪರ ಐಕ್ಯತೆಯಿಂದ ಜನಗಳ ಸಮಸ್ಯೆಗಳಿಗಾಗಿ ಹೋರಾಟ ಮಾಡಿದಲ್ಲಿ, ಈ ರಾಜ್ಯದ ರಾಜಕೀಯ ನಕ್ಷೆಯಲ್ಲಿಯೂ ಬದಲಾವಣೆಯನ್ನು ಕಾಣುವುದು ಖಂಡಿತ ಎಂದು ತಿಳಿಸಿದೆ.

ಲೋಕಸಭಾ ಚುನಾವಣೆಗಳಲ್ಲಿ ಸೋತಿರುವುದರಿಂದ ಕಾಂಗ್ರೆಸ್ (ಐ) ಯೇತರ ರಾಜ್ಯ ಸರಕಾರಗಳು ರಾಜೀನಾಮೆ ಕೊಡಬೇಕೆಂದು ಕಾಂಗ್ರೆಸ್ (ಐ) ಮುಖಂಡರು ಒತ್ತಾಯಪಡಿಸುತ್ತಿರುವುದನ್ನು ಪ್ರಸ್ತಾಪಿಸಿರುವ ಎಂ. ಕೆ. ಭಟ್‌ರವರು, ಕಾಂಗ್ರೆ ನೇತೃತ್ವದ ಸಂಯುಕ್ತ ಪ್ರಜಾಸತ್ತಾತ್ಮಕರಂಗ ಲೋಕಸಭಾ ಚುನಾವಣೆಗಳಲ್ಲಿ ತ್ರಿವೇಂದ್ರಂ ಜಿಲ್ಲೆಯ ಎರಡು ಸ್ಥಾನಗಳನ್ನೂ ಹಾಗೂ ಕೊಲ್ಲಂ ಜಿಲ್ಲೆಯ ಒಂದು ಸ್ಥಾನವನ್ನು ಪಡೆದುಕೊಂಡಿತ್ತು, ಈಗ ವಿಧಾನಸಭಾ ಚುನಾವಣೆಗಳಲ್ಲಿ ಮೇಲ್ಕಾಣಿಸಿದ ಎರಡು ಜಿಲ್ಲೆಗಳಲ್ಲೂ ಎಡ ಮತ್ತು ಪ್ರಜಾಸತ್ತಾತ್ಮಕ ರಂಗದ ಅಭ್ಯರ್ಥಿಗಳು ಎರಡು ಜಿಲ್ಲೆಗಳ 28 ಸ್ಥಾನಗಳ ಪೈಕಿ 21 ಸ್ಥಾನಗಳನ್ನು ಗದ್ದಿರುವುದರಿಂದ ನಾವು ಮೂರು ಜನ ಲೋಕಸಭಾ ಸದಸ್ಯರನ್ನು ರಾಜೀನಾಮೆ ಕೊಡಿ ಎಂದು ಕೇಳಬೇಕಾಗುತ್ತದೆ ಎಂದು ನುಡಿದರು.

ಲೋಕಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ (ಐ)ಗೆ ಇಡೀ ದೇಶದಲ್ಲಿ ಬಹುಮತ ಸಿಕ್ಕಿದ್ದರೂ ಸಿ. ಪಿ. ಐ. (ಎಂ) ನೇತೃತ್ವದ ಎಡರಂಗ ಸರಕಾರ ಅಧಿಕಾರದಲ್ಲಿ ಇರುವ ಪ. ಬಂಗಾಳ ಮತ್ತು ತ್ರಿಪುರಾ ರಾಜ್ಯಗಳಲ್ಲಿ ಕಾಂಗ್ರೆ ಪ್ರಭಾವ ಜನತೆಯ ಮೇಲೆ ಏನೇನೂ ಆಗಿಲ್ಲ. ಸಿ. ಪಿ. ಐ. (ಎಂ) ನೇತೃ

[ಕಡೆಯ ಪುಟ ನೋಡಿ]

### ಕೇರಳ ವಿಧಾನಸಭಾ ಚುನಾವಣೆ

# ಎಡ ಮತ್ತು ಪ್ರಜಾಸತ್ತಾತ್ಮಕ ರಂಗದ ಅದ್ಭುತ ವಿಜಯ

## ಕಾಂ. ಇ. ಕೆ. ನಯನಾರ್ ಹೊಸ ಮುಖ್ಯಮಂತ್ರಿ

ಇಡೀ ದೇಶದಲ್ಲಿ ಎಲ್ಲರ ನಿರೀಕ್ಷೆಗಳನ್ನು ಮೀರಿಸಿ, ಕೇರಳದ ಜನತೆ ಮತ್ತೊಮ್ಮೆ ತಮ್ಮ ರಾಜಕೀಯ ಪ್ರಬುದ್ಧತೆಯನ್ನು ತೋರಿಸಿದ್ದಾರೆ. ಕೆಲವೇ ದಿನಗಳ ಹಿಂದೆ ನಡೆದ ಏಳನೇ ಲೋಕಸಭಾ ಚುನಾವಣೆಗಳಲ್ಲಿ ಸಹಾ ಕೇರಳದ ಜನತೆ ಎಡ ಮತ್ತು ಪ್ರಜಾಸತ್ತಾತ್ಮಕ ರಂಗಕ್ಕೆ ಬಹುಪಾಲು ಕ್ಷೇತ್ರಗಳಲ್ಲಿ ವಿಜಯವನ್ನು ದೊರಕಿಸಿದ್ದರು. ದೇಶದಲ್ಲಿ ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ, ಸಮರ್ಥ, ಸುಭದ್ರ ಸರಕಾರವನ್ನು ಮಾಡಲು ಶ್ರೀಮತಿ ಇಂದಿರಾಗಾಂಧಿಯವರಿಂದ ಮಾತ್ರ ಸಾಧ್ಯವೆಂದು ಬೂರ್ಜ್ವಾ ಪತ್ರಿಕೆಗಳು ಹೊಗಳುಭಟ್ಟಂಗಿ ಕೆಲಸ ಮಾಡುತ್ತಾ, ತಮ್ಮ ಪತ್ರಿಕೆಗಳನ್ನು ಕಾಂಗ್ರೆಸ ತುತ್ತೂರಿಗಳನ್ನಾಗಿ ಮಾಡಿ ದೊಡ್ಡ ಪ್ರಚಾರ ನೀಡುತ್ತಿದ್ದಾರೆ. ಅಲ್ಲದೆ, ಇತ್ತೀಚೆಗೆ ಕಾಂಗ್ರೆ ಅಧಿಕಾರಕ್ಕೆ ಬಂದಮೇಲೆ ದೇಶದಲ್ಲಿ ಆದ ಪ್ರಥಮ ಚುನಾವಣೆ ಇದು. ಇವೆಲ್ಲದರ ಹಿನ್ನೆಲೆಯಲ್ಲಿ ನಡೆದ ಚುನಾವಣೆಗೆ ಶ್ರೀಮತಿ ಇಂದಿರಾಗಾಂಧಿಯವರು ರಾಜ್ಯಾದ್ಯಂತ ಮೂರು ದಿನಗಳ ಪ್ರಚಾರ ನಡೆಸಿದರು. ಕೋಮುವಾದಿ ಶಕ್ತಿಗಳನ್ನು ಕಟ್ಟಿಕೊಂಡು ಚುನಾವಣಾ ಕಣಕ್ಕೆ ಇಳಿದಿದ್ದ ಕಾಂಗ್ರೆಸ ನಾಯಕಿ ಶ್ರೀಮತಿ ಇಂದಿರಾಗಾಂಧಿಯವರು ಧಾರ್ಮಿಕ ಭಾವನೆಗಳನ್ನು ಕೆರಳಿಸಿ ಜನಗಳನ್ನು ತಮ್ಮತ್ತ ಸೆಳೆದುಕೊಳ್ಳಲು ಸುಪ್ರಸಿದ್ಧ ದೇವಾಲಯಗಳಾದ ಗುರುವಾಯೂರು ದೇವಸ್ಥಾನ, ತಿರುವನಂತಪುರದ ಶ್ರೀ ಪದ್ಮನಾಭಸ್ವಾಮಿ ದೇವಸ್ಥಾನ ಹಾಗೂ ವರ್ಕಲದಲ್ಲಿ ನಾರಾಯಣಗುರು ಸಮಾಧಿಗಳಿಗೆ ಭೇಟಿ ನೀಡಿ ಆಶೀರ್ವಾದಗಳನ್ನು ಪಡೆದರು, ತುಲಾಭಾರ ಮಾಡಿಸಿಕೊಂಡರು. ಕೋಮುವಾದಿ ಆರೆಸ್ಸೆಸ್-ಜನಸಂಘಗಳ ನೇತೃತ್ವವಿರುವ ಜನತಾಪಕ್ಷವನ್ನು ತಮ್ಮ ಚುನಾವಣಾ ಮಿತ್ರಪಕ್ಷವನ್ನಾಗಿ ಸೇರಿಸಿಕೊಂಡಿದ್ದರೂ, ಸಿ.ಪಿ.ಐ(ಎಂ) ಪಕ್ಷ ಜನತಾಪಕ್ಷಕ್ಕೆ ಬೆಂಬಲ ನೀಡಿದ್ದರಿಂದಲೇ ದೇಶಕ್ಕೆ ದುರ್ಗತಿ ಬಂತೆಂದು ಆಲಾಪಿಸಿದರು.

ತಾ॥ 21-1-1980 ರಂದು ನಡೆದ ಚುನಾವಣೆಯಲ್ಲಿ ಶೇಕಡ 75 ರಿಂದ 85ರವರೆಗೆ ಮತದಾನ ನಡೆಯಿತು. ಮತದಾನದಲ್ಲಿ ಅತಿ ಉತ್ಸಾಹದಿಂದ ಭಾಗವಹಿಸಿದವರಲ್ಲಿ ಮಹಿಳೆಯರೇ ಹೆಚ್ಚು. ಸಂಸತ್ತಿನಲ್ಲಿ ಬಹುಮತ ಪಡೆದು ಕೇಂದ್ರದಲ್ಲಿ ಅಧಿಕಾರ ಸೂತ್ರಗಳನ್ನು ಹಿಡಿದಿರುವ ಕಾಂಗ್ರೆ ಪಕ್ಷಕ್ಕೆ ಜನ ಮತ ನೀಡುತ್ತಾರೋ ಅಥವಾ ಜನಸಾಮಾನ್ಯರ ಹಿತಕ್ಕಾಗಿ ಒಂದು ಸಾಮಾನ್ಯ ಕಾರ್ಯಕ್ರಮದ ಅಡಿಯಲ್ಲಿ ಕೆಲಸ ಮಾಡಲು ಸಿದ್ಧರಿರುವ, ಅದಕ್ಕಾಗಿ ಹೋರಾಟ ಮಾಡುವ ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳಿಗೆ ಜನ ಒಲಿಯುವರೋ ಎಂಬ ಕುತೂಹಲ ಬಹಳಷ್ಟು ಕಡೆ ಉಂಟಾಗಿತ್ತು. ಫಲಿತಾಂಶಗಳು ಯಾವರೀತಿ ಆಗಬಹುದೆಂದು ಅಂದಾಜು ಮಾಡಲು ವಿಫಲವಾದ ಅನೇಕ ಬೂರ್ಜ್ವಾ ಪತ್ರಿಕೆಗಳು, ಚುನಾವಣಾ ಪೂರ್ವ ಪರಿಸ್ಥಿತಿಯನ್ನು ವಿಮರ್ಶಿಸುವ ಗೋಜಿಗೂ ಹೋಗದೆ ಬರೀ ಶ್ರೀಮತಿ ಗಾಂಧಿಯವರ ಸ್ಟಂಟ್‌ಗಳಿಗೆ ಪ್ರಚಾರಕೊಟ್ಟು ತೃಪ್ತರಾದರು.

ತಾ॥ 22-1-1980ರ ಬೆಳಗ್ಗೆ ಎಣಿಕೆ ಪ್ರಾರಂಭವಾಗಿ ರಾತ್ರಿ 8 ಗಂಟೆಗೆ ಮುಗಿದಾಗ ಎಲ್ಲಾ ಕ್ಷೇತ್ರಗಳ ಫಲಿತಾಂಶಗಳನ್ನು ಪ್ರಕಟಿಸಲಾಗಿತ್ತು. ಪ್ರಕಟವಾದ 140 ಸ್ಥಾನಗಳ ಪೈಕಿ ಎಡ ಮತ್ತು ಪ್ರಜಾಸತ್ತಾತ್ಮಕ ರಂಗಕ್ಕೆ ಒಟ್ಟು 93 ಸ್ಥಾನಗಳು ಸಿಕ್ಕವೆ. ಸಂಯುಕ್ತ ಪ್ರಜಾಸತ್ತಾತ್ಮಕ ರಂಗಕ್ಕೆ ಕೇವಲ 41 ಸ್ಥಾನಗಳು ಸಿಕ್ಕಿದ್ದು, ಜನತಾ ಪಕ್ಷ 5 ಸ್ಥಾನಗಳಲ್ಲಿ ಹಾಗೂ ಪಕ್ಷೇತರ ಅಭ್ಯರ್ಥಿಯೊಬ್ಬರು ಆಯ್ಕೆಯಾಗಿದ್ದಾರೆ.

[ಕಡೆಯ ಪುಟ ನೋಡಿ]

# ಚುನಾವಣಾ ಫಲಿತಾಂಶ ಮತ್ತು ನಮ್ಮ ಜವಾಬ್ದಾರಿ

ಏಳನೇ ಲೋಕಸಭಾ ಚುನಾವಣೆಗಳ ಫಲಿತಾಂಶಗಳು ಈಗತಾನೆ ಪ್ರಕಟವಾಗಿವೆ. ಅಂಕಿ, ಅಂಶಗಳ ತಜ್ಞರು ವಿವಿಧ ರಾಜಕೀಯ ಪಕ್ಷಗಳು ಗಳಿಸಿದ ಶೇಕಡಾವಾರು ಮತಗಳ ಸಂಖ್ಯೆಯ ಆಧಾರದ ಮೇಲೆ ಚುನಾವಣಾ ಫಲಿತಾಂಶಗಳನ್ನು ವಿಶ್ಲೇಷಿಸುವುದರಲ್ಲಿ ತೊಡಗಿದ್ದಾರೆ. ಇದುವರೆಗೆ ಸಿಕ್ಕಿರುವ ಅಂಕಿ, ಸಂಖ್ಯೆಗಳ ಪ್ರಕಾರ ದೇಶದಲ್ಲಿ ಎಲ್ಲಿಯೂ ಮತದಾನ ಒಂದೇ ರೀತಿಯಲ್ಲಿ ಆಗಿಲ್ಲ. ಸಂಶಯಾತೀತ ಸಂಗತಿಯೆಂದರೆ ಚುನಾವಣೆಗಳಲ್ಲಿ ಕಾಂಗ್ರೆಸ್ (ಐ) 351 ಸ್ಥಾನಗಳನ್ನು ಗಳಿಸಿ ಲೋಕಸಭೆಯಲ್ಲಿ ಮೂರನೇ ಎರಡರಷ್ಟು ಬಹುಮತವನ್ನು ಪಡೆದುಕೊಂಡಿರುವುದು. ಆದರೆ ಮತದಾನದ ಸಂಖ್ಯೆಗಳು ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿವೆ. ಕರ್ನಾಟಕ ಮತ್ತು ಆಂಧ್ರಪ್ರದೇಶಗಳಲ್ಲಿ ಕಾಂಗ್ರೆಸ್ (ಐ) ಚಲಾವಣೆಯಾದ ಮತಗಳಲ್ಲಿ ಬಹುಪಾಲನ್ನು ಪಡೆದುಕೊಂಡಿದೆ. ತಮಿಳುನಾಡಿನಲ್ಲಿಯೂ ಅದು ತನ್ನ ಮತಗಳನ್ನು ಹೆಚ್ಚಿಸಿಕೊಂಡಿದೆ. ಕೇರಳ ರಾಜ್ಯದಲ್ಲಿ ಮಾತ್ರ ಕಾಂಗ್ರೆಸ್ (ಐ) ಎಡ ಮತ್ತು ಪ್ರಜಾಸತ್ತಾತ್ಮಕ ರಂಗವನ್ನು ಸಿ. ಪಿ. ಐ. (ಎಂ) ವಿರೋಧಿ ರಂಗವನ್ನು ಕಟ್ಟಿ ಕಳೆದ ಬಾರಿಗಿಂತ ಕಡಿಮೆ ಸ್ಥಾನಗಳನ್ನು ಪಡೆಯಿತು. ಈ ರಾಜ್ಯದಲ್ಲಿ ಕಾಂಗ್ರೆಸ್ (ಐ) ಅಧ್ಯಕ್ಷ ಕೆ. ಎಂ. ಚಾಂಡಿ ಸಹಾ ಚುನಾವಣೆಯಲ್ಲಿ ಪರಾಭವ ಹೊಂದಿದ್ದಾರೆ. ಗುಜರಾತ್ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಕಾಂಗ್ರೆಸ್ (ಐ) ತನ್ನ ಸ್ಥಾನಗಳನ್ನು ಹಾಗೂ ಒಟ್ಟು ಮತಗಳ ಸಂಖ್ಯೆಯನ್ನು ಹೆಚ್ಚಿಸಿಕೊಂಡಿದೆ.

ಉತ್ತರ ಭಾರತದಲ್ಲಿ, ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ (ಐ) ಓಟುಗಳ ಸಂಖ್ಯೆ ಹೆಚ್ಚಾಗಿದೆ. ಆದರೆ ಉತ್ತರ ಪ್ರದೇಶ ಮತ್ತು ಹರಿಯಾಣ ರಾಜ್ಯಗಳಲ್ಲಿ ಹೆಚ್ಚಿನ ಸ್ಥಾನಗಳನ್ನು ಗಳಿಸಿದ್ದರೂ, ತುರ್ತು ಪರಿಸ್ಥಿತಿಯ ಕಟು ಅನುಭವವನ್ನು ಬೇರೆಯವರಿಗಿಂತ ಹೆಚ್ಚಾಗಿ ಅನುಭವಿಸಿರುವ ಈ ರಾಜ್ಯಗಳ ಜನತೆ ತುಲನಾತ್ಮಕವಾಗಿ ಬೇರೆ ರಾಜ್ಯಗಳ ಜನತೆ ನೀಡಿದಷ್ಟು ಅಧಿಕ ಓಟುಗಳನ್ನು ಕಾಂಗ್ರೆಗೆ ನೀಡಿಲ್ಲ. ಹರಿಯಾಣದಲ್ಲಿ ಲೋಕದಳಕ್ಕೆ ಸಿಕ್ಕಿದ ಒಟ್ಟು ಮತಗಳು, ಕಾಂಗ್ರೆಗೆ ಸಿಕ್ಕಿದ ಓಟುಗಳಿಂದ ಅಧಿಕವಾಗಿದೆ.

ಒರಿಸ್ಸಾ ರಾಜ್ಯದಲ್ಲಿ ಕಾಂಗ್ರೆಗೆ ದೊಡ್ಡ ರೀತಿಯಲ್ಲಿ ಜಯ ಸಿಕ್ಕಿದೆ. ಆದರೆ ಪ. ಬಂಗಾಳ ಮತ್ತು ತ್ರಿಪುರಾ ರಾಜ್ಯಗಳಲ್ಲಿ ಅದಕ್ಕೆ ಸಂಪೂರ್ಣ ಸೋಲಾಗಿದೆ. ಪ. ಬಂಗಾಳದಲ್ಲಿ 42 ಸ್ಥಾನಗಳ ಪೈಕಿ ಕಾಂಗ್ರೆ ಕೇವಲ ನಾಲ್ಕು ಸ್ಥಾನಗಳನ್ನು ಪಡೆದಿದೆ. ಎಡರಂಗ 37 ಸ್ಥಾನಗಳನ್ನು ಪಡೆದಿರುವುದಲ್ಲದೆ ಚಲಾಯಿಸಲಾದ ಮತಗಳಲ್ಲಿ ಶೇಕಡ 53.8 ರಷ್ಟು ಮತಗಳನ್ನು ಪಡೆದಿದೆ. ಒಂದು ಸ್ಥಾನಕ್ಕೆ ಚುನಾವಣೆಯನ್ನು ತಡೆಹಿಡಿಯಲಾಗಿದೆ. ತ್ರಿಪುರಾ ರಾಜ್ಯದ ಎರಡೂ ಸ್ಥಾನಗಳನ್ನು ಸಿ ಪಿ ಐ (ಎಂ) ಪಡೆದುಕೊಂಡಿದೆ. ಸಿ. ಪಿ. ಐ. (ಎಂ) ಪಕ್ಷ ಈ ಚುನಾವಣೆಗಳಲ್ಲಿ ಗಳಿಸಿದ ಒಟ್ಟು ಓಟುಗಳ ಸಂಖ್ಯೆ 11.6 ಮಿಲಿಯನ್ ಅಥವಾ 1977ರ ಚುನಾವಣೆಯಲ್ಲಿ ಪಡೆದ ಓಟುಗಳಿಗಿಂತ ನಾಲ್ಕು ಮಿಲಿಯನ್ ಹೆಚ್ಚು ಮತಗಳನ್ನು ಗಳಿಸಲಾಗಿದೆ.

ಕೇರಳ, ಪ. ಬಂಗಾಳ ಮತ್ತು ತ್ರಿಪುರಾ ರಾಜ್ಯಗಳ ಚುನಾವಣಾ ಫಲಿತಾಂಶಗಳಿಂದ ಒಂದು ವಿಷಯ ಸ್ಪಷ್ಟವಾಗಿದೆ. ಏನೆಂದರೆ, ಎಲ್ಲಿ ಕಾಂಗ್ರೆಗೆ ಪ್ರತಿಯಾದ ಶಕ್ತಿಯಾಗಿ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಅಸ್ತಿತ್ವಕ್ಕೆ ಬಂದಿದೆಯೋ ಅಲ್ಲಿ ಜನತೆ ಅವರನ್ನು ಆರಿಸಿದ್ದಾರೆ. ಇದಕ್ಕೆ ವಿರುದ್ಧವಾಗಿ ಯಾವ ರಾಜ್ಯಗಳಲ್ಲಿ ಈ ಕೂಟವು ಎರಡು ಅಥವಾ ಮೂರು ಬೂರ್ಜ್ವಾ-ಭೂಮಾಲಕ ವರ್ಗದ ಪಕ್ಷಗಳಿಗೆ ನಿಮಿತವಾಗಿದೆಯೋ ಅಥವಾ ಅವುಗಳ ಮಿಶ್ರಣ ಕೂಟವನ್ನು ಬದಲಿಯಾಗಿ ಜನತೆಯ ಮುಂದಿಡಲಾಗಿದೆಯೋ ಅಲ್ಲಿ ಜನತೆ ಕಾಂಗ್ರೆ ಪಕ್ಷವನ್ನು ಆರಿಸಿದ್ದಾರೆ.

ಚುನಾವಣಾ ಫಲಿತಾಂಶಗಳ ಬಗ್ಗೆ ವಿವಿಧ ರಾಜಕೀಯ ಪಕ್ಷಗಳು ವಿವಿಧ ರೀತಿಯಲ್ಲಿ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತಿದ್ದಾರೆ. ಇದುವರೆಗೆ ವ್ಯಕ್ತಪಡಿಸಿರುವ ಅಭಿಪ್ರಾಯಗಳು ಅಂತಿಮವಾದದ್ದು ಅಥವಾ ಪೂರ್ತಿ ಚರ್ಚೆಯಾದದ್ದು ಎಂದು ಹೇಳುವಂತಿಲ್ಲ. ಆದರೆ ಪ್ರತಿಕ್ರಿಯೆಗಳಿಂದ ಮುಂದೆ ಆ ಪಕ್ಷಗಳು ಯಾವ ದಿಕ್ಕಿನಲ್ಲಿ ಮುಂದುವರಿಯಬಹುದು ಎಂಬುದನ್ನು ಮಾತ್ರ ತಿಳಿಯಬಹುದು.

### ಮೊದಲ ಪ್ರತಿಕ್ರಿಯೆ ಸಿ.ಪಿ.ಐ.(ಎಂ) ನಿಂದ :

ಎಡ ಪಕ್ಷಗಳ ಪೈಕಿ ಸಿ ಪಿ ಐ(ಎಂ) ಚುನಾವಣೆಗಳ ಬಗ್ಗೆ ಮೊಟ್ಟಮೊದಲು ಪ್ರತಿಕ್ರಿಯೆ ವ್ಯಕ್ತಪಡಿಸಿದ ಪಕ್ಷ ಜನವರಿ ಹತ್ತರಂದು ಬಿಡುಗಡೆ ಮಾಡಿದ ಪಕ್ಷದ ಹೇಳಿಕೆಯಲ್ಲಿ ಕಾಂಗ್ರೆ ವಿಜಯದ ಕಾರಣಗಳನ್ನು ಪೊಲಿಟ್ ಬ್ಯೂರೋ ಈ ರೀತಿ ನೀಡಿದೆ: ಕಾಂಗ್ರೆ ಮತ್ತದರ ಮಿತ್ರ ಪಕ್ಷಗಳು ಪ್ರಸಕ್ತ ಲೋಕಸಭಾ ಚುನಾವಣೆಯಲ್ಲಿ ಮೂರನೇ ಎರಡರಷ್ಟು ಬಹುಮತವನ್ನು ಪಡೆದಿದೆ ಮಾತ್ರವಲ್ಲ, ಅಧಿಕಾರಕ್ಕೆ ಪ್ರಯತ್ನಿಸಿದ ಉಳಿದೆರಡು ಬೂರ್ಜ್ವಾ-ಭೂಮಾಲಕ ಪಕ್ಷಗಳು ಸಂಪೂರ್ಣವಾಗಿ ಸೋತಿವೆ. ಕೇರಳ, ಪ. ಬಂಗಾಳ ಮತ್ತು ತ್ರಿಪುರಾ ರಾಜ್ಯಗಳನ್ನು ಬಿಟ್ಟರೆ ಬೇರೆ ರಾಜ್ಯಗಳಲ್ಲಿ ಕಾಂಗ್ರೆಗೆ ಪ್ರತಿಯಾದ ಬದಲಿಯೊಂದನ್ನು ಜನತೆಯ ಮುಂದಿಡಲು ಬೇರೆ ರಾಜ್ಯಗಳಲ್ಲಿ ಸಾಧ್ಯವಾಗಲಿಲ್ಲ. ಪರಿಸ್ಥಿತಿಯ ಲಾಭ ಪಡೆದ ಕಾಂಗ್ರೆಸ್ (ಐ) ಪಕ್ಷ ಜನಗಳನ್ನು ತನ್ನತ್ತ ಸೆಳೆದುಕೊಳ್ಳುವುದರಲ್ಲಿ ಯಶಸ್ವಿಯಾಯಿತು, ಹೊಸ ಲೋಕಸಭೆಯಲ್ಲಿ ಬಹುಮತ ಪಡೆಯುವುದರಲ್ಲಿ ಯಶಸ್ವಿಯಾಯಿತು.

ಜನತಾಪಕ್ಷ, ಲೋಕದಳ ಮತ್ತು ಕಾಂಗ್ರೆಸ್ (ಯು) ಪಕ್ಷಗಳು ಕಾಂಗ್ರೆಗೆ ಬದಲಿಯಾದ ಪಕ್ಷಗಳೆಂದು ಮೂಡಿಬರಲು ವಿಫಲವಾದ ಬಗ್ಗೆ ಹೇಳಿಕೆಯು ಈ ರೀತಿ ಹೇಳಿದೆ: ಕಾಂಗ್ರೆ ಪಕ್ಷದ ವಿಜಯಕ್ಕೆ ವಿರೋಧಿ ಬೂರ್ಜ್ವಾ-ಭೂಮಾಲಕ ಪಕ್ಷಗಳ ಸಂಘಟನೆ ಕುಸಿದು ಹೋಗಿತ್ತಲ್ಲದೆ, ಆಂತರಿಕ ಜಗಳಗಳಿಂದ ಜನತೆಯ ವಿಶ್ವಾಸವನ್ನು ಕೊಂಡಿದ್ದರು. ಜನತಾಪಕ್ಷ ಚುನಾವಣೆಗೆ ಮೊದಲು ಮತ್ತು ಚುನಾವಣಾ ಕಾಲದಲ್ಲಿ ತನ್ನ ಸಂಪೂರ್ಣ ಗಮನವನ್ನು ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ವಿನಿಯೋಗಿಸುವ ಬದಲು, ಬರೀ ಪಕ್ಷಾಂತರವನ್ನು ವಿರೋಧಿಸುವಲ್ಲಿ ಕಳೆಯಿತು. ಇದರಿಂದ ಪ್ರಾರಂಭದಲ್ಲಿ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಪುನಃ ದೊರೆಯುವಂತೆ ಮಾಡಿದ ಅದರ ಕೆಲಸ ಹಿಂದಕ್ಕೆ ಹೋಯಿತು. ಪ್ರತಿಯೊಂದು ಜನತಾ ಮುಂಗಡ ಪತ್ರದ ಮಂಡಿಕೆಯೊಂದಿಗೆ ಜನಗಳ ಆರ್ಥಿಕ ಸಂಕಷ್ಟಗಳು ಹೆಚ್ಚಾಗುತ್ತಾ ಹೋದವು. ಅಗತ್ಯ ವಸ್ತುಗಳಾದ ಸಕ್ಕರೆ, ತರಕಾರಿ ಮತ್ತು ಈರುಳ್ಳಿಗಳ ಬೆಲೆ ಜನಸಾಮಾನ್ಯನ ಕೈಗೆ ಎಟುಕದಂತಾಯಿತು. ಉಸ್ತುವಾರಿ ಸರಕಾರದ ಐದು ತಿಂಗಳ ಅಧಿಕಾರಾವಧಿಯಲ್ಲಿ ಬೆಲೆಗಳು ಮತ್ತಷ್ಟು ಏರಿದವು".

ಜನತಾ ಪಕ್ಷದ ಸೋಲಿಗೆ ಕಾರಣಗಳನ್ನು ಸಂಕ್ಷಿಪ್ತವಾಗಿ ವಿವರಿಸುತ್ತಾ ಹೇಳಿಕೆ: ಜನತಾ ಪಕದ ನಾಯಕತ್ವ ಆರೆಸ್ಸೆಸ್ - ಜನಸಂಘಗಳ ದೃಷ್ಟಿಕೋನಕ್ಕೇ ಹೆಚ್ಚು ಒಳಗಾಯಿತು. ಇದರಿಂದ ಅಲ್ಪಸಂಖ್ಯಾತ ಮುಸ್ಲಿಮರು ಮತ್ತು ಜಮೀನುದಾರರ ದಬ್ಬಾಳಿಕೆಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬಲಿಯಾದ ಹರಿಜನರು ಪಕದಿಂದ ದೂರವಾದರು. ಅಲಿಘಡ ಮತ್ತು ಜಮ್‌ಷಡ್‌ಪುರಗಳ ಮತೀಯ ದಂಗೆಗಳ ನಂತರ ಬಹುಪಾಲು ಮುಸ್ಲಿಂ ಅಲ್ಪಸಂಖ್ಯಾತರು ಕಾಂಗ್ರೆಗೆ ಹೋದರು. ಹಾಗೆಯೇ 1977ರ ವಿಧಾನಸಭಾ ಚುನಾವಣೆಗಳ ಸಮಯದಲ್ಲಿಯೇ ಹರಿಜನರೂ ಜನತಾಪಕ್ಷದಿಂದ ದೂರವಾದರು. ಆರೆಸ್ಸೆಸ್-ಜನಸಂಘಗಳ ಸಂಕುಚಿತವಾದವು ಬುದ್ಧಿಜೀವಿಗಳ ಮನಸ್ಸಿನಲ್ಲಿ ತದ್ವಿರುದ್ಧ ಭಾವನೆಗಳು ಬೆಳೆಯುವಂತೆ ಮಾಡಿತು. ಇದರಿಂದ ಜನತಾ ಪಕ್ಷದಲ್ಲಿರುವ ಎಡ ಮತ್ತು ಸಮಾಜವಾದಿ ಶಕ್ತಿಗಳು ಅರಿಯಬೇಕಾದ ಸಂಗತಿಯೆಂದರೆ ಜಾತ್ಯಾತೀತತೆಯನ್ನು ಬಿಟ್ಟು ಯಾವುದೇ ಪ್ರಜಾಸತ್ತಾತ್ಮಕ ಪಕ್ಷವನ್ನು ಕಟ್ಟುವುದು ಸಾಧ್ಯವಿಲ್ಲ.

ಹೇಳಿಕೆಯಲ್ಲಿ ಪೊಲಿಟ್‌ಬ್ಯೂರೋ ಮತ್ತೊಂದು ಅಂಶವನ್ನು ಎತ್ತಿ ತೋರಿಸಿ "ಜನತಾ ಪಕ್ಷವಲ್ಲದೆ ಕಾಂಗ್ರೆಸ್ - ಲೋಕದಳ ಪಕ್ಷಗಳು ಕೂಡಾ ಇಂದಿರಾಗಾಂಧಿಯವರ ವಿಜಯಕ್ಕೆ ಕಾರಣವಾಗಿವೆ" ಎಂದಿದ್ದಾರೆ. ಇವರ ಆಂತರಿಕ ಜಗಳಗಳನ್ನು ಹೆಸರಿಸುವುದಲ್ಲದೆ, ಲೋಕದಳದ ನಾಯಕರು ಕಾರ್ಮಿಕ ವರ್ಗದ ಬಗ್ಗೆ ಮಾಡಿರುವ ಟೀಕೆ, ಟಿಪ್ಪಣಿಗಳು ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸಿತೆಂದು ತಿಳಿಸಿದ್ದಾರೆ.

### ಎಡಶಕ್ತಿಗಳು ಮಾತ್ರ ಬದಲಿಯನ್ನು ನೀಡಬಲ್ಲವು :

ಪ. ಬಂಗಾಳ ಮತ್ತು ತ್ರಿಪುರಾ ಎಡರಂಗ ಸರಕಾರಗಳ ಜನಪರ ನೀತಿಗಳನ್ನು ಪರಿಶೀಲಿಸಿದ ಪೊಲಿಟ್ ಬ್ಯೂರೋ ಅನೇಕ ತೊಂದರೆಗಳನ್ನು ಎದುರಿಸಿ ಜನತೆಯ ಮಧ್ಯೆ ಕೆಲಸ ಮಾಡುತ್ತಿರುವ ಪಕ್ಷಗಳಿಗೆ ಜನಬೆಂಬಲ ಅಧಿಕವಾಗಿ ಸಿಕ್ಕಿದ್ದು ಆಶ್ಚರ್ಯವೇನಲ್ಲವೆಂದು ಪೊಲಿಟ್‌ಬ್ಯೂರೋ ಭಾವಿಸಿದೆ. ಇಂದಿರಾ ಕಾಂಗ್ರೆಸ್ಸಿಗೆ ಪರ್ಯಾಯವಾದ ಸರಿಯಾದ ಬದಲಿ ಪಕ್ಷವೊಂದು ಇದ್ದಲ್ಲಿ ಜನತೆ ಕಾಂಗ್ರೆಯನ್ನು ತಿರಸ್ಕರಿಸುತ್ತಾರೆಂಬುದು ಇದರಿಂದ ಸ್ಪಷ್ಟವಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳು ಮಾತ್ರ ಅಂತಹ ಪರ್ಯಾಯವನ್ನು ಒದಗಿಸಲು ಸಾಧ್ಯ ಎಂಬುದನ್ನು ಒತ್ತಿ ಹೇಳಬೇಕಾಗಿಲ್ಲ.

ಸಂಸತ್ತಿನಲ್ಲಿ ಇಂದಿರಾಗಾಂಧಿಯವರಿಗೆ ಮೂರನೇ ಎರಡರಷ್ಟು ಬಹುಮತ ಬಂದಿರುವುದು ಪ್ರಜಾಸತ್ತೆಗೆ ಗಂಡಾಂತರಕಾರಿ ಎಂದು ತಿಳಿಸಿರುವ ಹೇಳಿಕೆ: "ಕಾಂಗ್ರೆಗೆ ಬಂದಿರುವ ಭಾರಿ ಬಹುಮತವು ಜನತೆಯ ಹಿತ ದೃಷ್ಟಿಯಿಂದ ಗಂಡಾಂತರಕಾರಿ ಎಂದು ಸಿ. ಪಿ. ಐ. (ಎಂ) ಜನಗಳನ್ನು ಎಚ್ಚರಿಸಿದೆ. ಬಹುಮತವು ಏಕವ್ಯಕ್ತಿಯ ನಿರಂಕುಶಾಧಿಕಾರಕ್ಕೆ ರಹದಾರಿ ಎಂದು ಕೆಲವರು ಅರ್ಥೈಸಬಹುದು. ದುಷ್ಟಕೂಟ ಸಹಾ ಮತ್ತೆ ಅಧಿಕಾರಕ್ಕೆ ಬಂದಿರುವುದು ಅಪಾಯವನ್ನು ಹೆಚ್ಚಿಸಿದೆ". ಈ ಅಪಾಯವನ್ನು ಎದುರಿಸಲು ಹಾಗೂ ಪ್ರಜಾಸತ್ತೆಯನ್ನು ಸ್ಥಿರಗೊಳಿಸಲು ಹೇಳಿಕೆ ಕರೆ ನೀಡಿದೆ. "ಸಂಸತ್ತಿನಲ್ಲಿರುವ ಎಲ್ಲಾ ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಿ ಜನತೆಯ ಪರವಾಗಿ ಅವರ ಹಕ್ಕುಗಳಿಗಾಗಿ ಸಹನೆಯಿಂದ ಹೋರಾಡಬೇಕು. ಆಳುವ ಪಕ್ಷದ ಬಹುಮತ, ವಿರೋಧ ಪಕ್ಷಗಳೆಲ್ಲಾ ಒಂದಾಗಿ ಪ್ರಜಾಸತ್ತಾತ್ಮಕ ಮೌಲ್ಯಗಳ ಉಳಿವಿಗಾಗಿ ಯತ್ನಿಸಬೇಕೆಂದು ಸ್ಪಷ್ಟಪಡಿಸಿದೆ.

### ಜನತೆ ಎಚ್ಚರದಿಂದ ಇರಬೇಕು :

ಪೊಲಿಟ್‌ಬ್ಯೂರೋ ಅಭಿಪ್ರಾಯದಲ್ಲಿ ಕಾಂಗ್ರೆ ತನ್ನ ಬಹುಮತದಿಂದ ದೇಶಕ್ಕೆ ಸ್ಥಿರ ಸರಕಾರವನ್ನು ಒದಗಿಸುವುದು ಸಾಧ್ಯವಿಲ್ಲ, ಅಲ್ಲದೆ ಜನಗಳ ಸಮಸ್ಯೆಗಳನ್ನೂ ಬಗೆಹರಿಸಲು ಸಾಧ್ಯವಿಲ್ಲ. ಪೊಲಿಟ್‌ಬ್ಯೂರೋ ಪ್ರಕಾರ: ಕೆಟ್ಟ ಆರ್ಥಿಕ ಬಿಕ್ಕಟ್ಟು, ಮತ್ತು ಬೆಲೆಏರಿಕೆಗಳಿಂದ ಜನಗಳಲ್ಲಿ ಉಂಟಾಗುವ ಅತೃಪ್ತಿಯನ್ನು ಉಪಯೋಗಿಸಿಕೊಂಡು ಜನವಿರೋಧಿ, ಕಾರ್ಮಿಕ ವಿರೋಧಿ ನೀತಿಗಳನ್ನು ಶಿಸ್ತು ಮತ್ತು ಸುವ್ಯವಸ್ಥೆಯನ್ನು ಪಾಲಿಸುವ ನೆಪದಲ್ಲಿ, ಸುಭದ್ರತೆಯ ಹೆಸರಿನಲ್ಲಿ ನಿರ್ದಯವಾಗಿ ಜಾರಿ ಮಾಡಬಹುದು. ಈ ಅಪಾಯವನ್ನು ಜನತೆ ಮತ್ತು ಪ್ರಜಾಪ್ರಭುತ್ವವಾದಿ ಪಕ್ಷಗಳು ಎಚ್ಚರದಿಂದ ಇದ್ದು, ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲಾಗುವ ಪ್ರತಿಯೊಂದು ದಾಳಿಯನ್ನೂ ಸಕ್ರಿಯವಾಗಿ ವಿರೋಧಿಸುವುದರಿಂದ ಮಾತ್ರ ತಡೆಯಬಹುದು."

ಎರಡು ದಿನಗಳ ಸಭೆಯ ನಂತರ ಜನವರಿ 11 ರಂದು ಸಿ. ಪಿ. ಐ. ಕೇಂದ್ರ ಸೆಕ್ರೆಟೇರಿಯಟ್ ಹೇಳಿಕೆಯನ್ನು ಹೊರಡಿಸಿ ಅದರಲ್ಲಿ ಕಾಂಗ್ರೆ ವಿಜಯಕ್ಕೆ ಕಾರಣಗಳನ್ನು ನೀಡುತ್ತಾ "ಜನತಾಪಕ್ಷದ ದುರಾಡಳಿತ ಮತ್ತು ಆರೆಸ್ಸೆಸ್-ಜನಸಂಘಗಳ ಪಿತೂರಿಯಿಂದ ಬೇಸತ್ತು ಜನತೆಗಾದ ಅತೀವ ಅಸಂತೃಪ್ತಿ"ಯೇ ಇದಕ್ಕೆ ಕಾರಣವೆಂದು ತಿಳಿಸಿದೆ. ಲೋಕದಳ-ಕಾಂಗ್ರೆಸ್ ಮೈತ್ರಿಕೂಟವನ್ನೂ ಆಕ್ಷೇಪಿಸಿರುವ ಸಿ. ಪಿ. ಐ. "ಲೋಕದಳ-ಕಾಂಗ್ರೆಸ್ (ಯು)ಗಳ ಉಸ್ತುವಾರಿ ಸರಕಾರ ಜನಗಳ ನಿರೀಕ್ಷೆಗಳನ್ನು ಹುಸಿ ಮಾಡಿದ್ದಲ್ಲದೆ, ಅಧಿಕಾರ ಪಡೆಯಬಲ್ಲ ಬದಲಿಯೆಂಬ ಭಾವನೆಯನ್ನು ಜನಗಳಲ್ಲಿ ಬೇರೂರಿಸುವುದಕ್ಕೆ ಆಗಲಿಲ್ಲ. ಚೌಧರಿ ಚರಣಸಿಂಗರು ನೀಡಿದ ಕೆಲವು ಬಹಿರಂಗ ಹೇಳಿಕೆಗಳು ಹಾಗೂ ಅನೇಕ ಪ್ರಜಾಪ್ರಭುತ್ವ ವಿರೋಧಿ ಕ್ರಮಗಳು ಇಂದಿರಾಗಾಂಧಿಯವರ ಚುನಾವಣಾ ಭವಿಷ್ಯವನ್ನು ಉಜ್ವಲಗೊಳಿಸಿದವು."

ಸಿ. ಪಿ. ಐ. (ಎಂ) ನಂತೆ ಸಿ. ಪಿ. ಐ. ಕೂಡಾ "ರಾಷ್ಟ್ರಮಟ್ಟದಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಪರ್ಯಾಯವೊಂದು ಇಲ್ಲದಿದ್ದರಿಂದ ಮತದಾರರು ಕಾಂಗ್ರೆಸ "ಸುಭದ್ರ ಸರಕಾರ"ದ ಘೋಷಣೆಗೆ ಮರುಳಾಗಿ ಓಟುಕೊಟ್ಟರು."

ಸಿ. ಪಿ. ಐ. (ಎಂ)ನ ಅಂದಾಜಿನಂತೆಯೇ ಸಿ ಪಿ ಐ ಕೂಡಾ "ಕಾಂಗ್ರೆಸ್ (ಐ) ತನ್ನ ನಿರೀಕ್ಷೆಯನ್ನು ಮೀರಿ ಬಹುಮತವನ್ನು ಪಡೆದಿರುವುದಲ್ಲದೆ, ತುರ್ತುಪರಿಸ್ಥಿತಿಯ ಕುಖ್ಯಾತ ದುಷ್ಟಕೂಟದ ಮುಖಂಡರೂ, ಅದ ಅತಿರೇಕಗಳಿಗೆ ಸ್ವಲ್ಪವೂ ಪಶ್ಚಾತ್ತಾಪ ಪಡದ ವ್ಯಕ್ತಿಗಳೂ ಮತ್ತೆ ಅಧಿಕಸಂಖ್ಯೆಯಲ್ಲಿ ಸಂಸತ್ತಿನಲ್ಲಿ ಕಾಣಿಸಿಕೊಂಡಿದ್ದಾರೆ. ಇತರ ದಾಳಿಕೋರ ಕಾರ್ಮಿಕ ವಿರೋಧಿ ನೀತಿಗಳು ಹಾಗೂ ಸಮಾಜವಾದದ ಬಗ್ಗೆ ಇವರಿಗಿರುವ ಕಳಕಳಿಯು ಎಲ್ಲರಿಗೂ ತಿಳಿದಿರುವುದರಿಂದ ಈ ಶಕ್ತಿಗಳ ಬಗ್ಗೆ ಅತಿ ಹೆಚ್ಚು ಜಾಗರೂಕತೆಯಿಂದಿರುವುದು ಅವಶ್ಯವಾಗಿದೆ."

[ಕಡೆಯ ಪುಟ ನೋಡಿ]

ಆರ್ಥಿಕ ಸಮೀಕ್ಷೆ:

# ಆರ್ಥಿಕ ಪರಿಸ್ಥಿತಿ ಜಾರುವ ದಾರಿಯಲ್ಲಿ

ಆರ್. ಚಂದ್ರ

**ತೀವ್ರ ಆರ್ಥಿಕ ಹಿಂಜರಿತ:**

ಸರಕಾರದ ಅಧಿಕೃತ ಮೂಲಗಳಿಂದಲೇ ತಿಳಿದು ಬರುವಂತೆ, ದೇಶದ ಆರ್ಥಿಕ ಪರಿಸ್ಥಿತಿಯು '80ರ ದಶಕದ ಮೊದಲ ವರ್ಷದಲ್ಲಿ ಕಾಲಿಡುತ್ತಿದ್ದಂತೆಯೇ ಇನ್ನೊಂದು ತೀವ್ರ ಹಿಂಜರಿತದತ್ತ (recession) ಮುಗ್ಗರಿಸುತ್ತಿದೆ.

ಇಂಜಿನೀಯರಿಂಗ್ ಸಾಮಗ್ರಿಗಳು, ಸೈಕಲ್‌ಗಳು, ಹೊಲಿಗೆ ಯಂತ್ರಗಳು, ಟ್ರಾನ್ಸಿಸ್ಟರ್ ರೇಡಿಯೋಗಳು, ವಿದ್ಯುತ್ ಬ್ಯಾಟರಿಗಳು, ಲಾಟೀನುಗಳು, ಸೀಮೆ ಎಣ್ಣೆ ಸ್ಟೌಗಳು, ಕೈಗಡಿಯಾರಗಳು ಮತ್ತಿತರ ಅನೇಕ ದಿನಬಳಕೆಯ ಕೈಗಾರಿಕಾ ಸಾಮಗ್ರಿಗಳು ಮಾರುಕಟ್ಟೆಯ ಅಭಾವದಿಂದ ತೀವ್ರ ಮುಗ್ಗಟ್ಟಿನಲ್ಲಿವೆ. ಮತ್ತು ಹೆಚ್ಚಿನ ಕೈಗಾರಿಕಾ ಸಂಸ್ಥೆಗಳು ರೋಗಗ್ರಸ್ತವಾಗಿವೆ.

ಸೆಪ್ಟೆಂಬರ್ '77 ರಿಂದ ಸೆಪ್ಟೆಂಬರ್ '78ರ ಅವಧಿಯಲ್ಲಿ ರೋಗಗ್ರಸ್ತ ಮಧ್ಯಮ ಹಾಗೂ ದೊಡ್ಡ ಕೈಗಾರಿಕಾ ಸಂಸ್ಥೆಗಳ ಸಂಖ್ಯೆಯು 270 ರಿಂದ 334ಕ್ಕೇರಿದೆ. ಇವುಗಳಲ್ಲಿ 110 ಇಂಜಿನೀಯರಿಂಗ್ ಮತ್ತು ವಿದ್ಯುತ್ ಉಪಕರಣಗಳಿಗೂ, 85 ಹತ್ತಿಬಟ್ಟೆಗೂ, 24 ರಾಸಾಯನಿಕ ಪದಾರ್ಥಗಳಿಗೂ ಮತ್ತು 32 ಸೆಣಬಿಗೂ ಸೇರಿವೆ. ಈ ಪ್ರತಿಯೊಂದು ರೋಗಗ್ರಸ್ತ ಸಂಸ್ಥೆಗೂ, ವಾಣಿಜ್ಯ ಬ್ಯಾಂಕುಗಳಲ್ಲಿ ಒಂದು ಕೋಟಿ ರೂಪಾಯಿಗಳಿಗೂ ಹೆಚ್ಚು ಸಾಲದ ಹೊರೆ ಇರುವುದು. ಈ ಅವಧಿಯಲ್ಲಿ ಇವುಗಳ ಋಣಭಾರವು ರೂ. 775 ಕೋಟಿಯಿಂದ ರೂ. 983 ಕೋಟಿಗೇರಿದೆ. ಇವುಗಳ ಸಾಲದ ಹೊರೆಯು ವಾಣಿಜ್ಯ ಬ್ಯಾಂಕುಗಳ ಸಾಲ ನೀಡಿಕೆಯ ಶೇ. 15.5ರಷ್ಟಾಗಿದೆ.

**ಕೈಗಾರಿಕಾಭಿವೃದ್ಧಿಯಲ್ಲಿ ಇಳಿಮುಖ:**

ಕೈಗಾರಿಕಾಭಿವೃದ್ಧಿಯ ದರವು ಈ ವರುಷ ಇಳಿಮುಖವಾಗಿರುವುದು ಆರ್ಥಿಕ ಹಿಂಜರಿತದ ಮುನ್ಸೂಚನೆಯಾಗಿದೆ. 1978ರಲ್ಲಿ ಕೈಗಾರಿಕಾ ಉತ್ಪಾದನೆಯು ಶೇ. 5.5 ರಷ್ಟು ಹೆಚ್ಚಾಗಿದ್ದರೆ, 1979 ರಲ್ಲಿ ಶೇ. 3.7ಕ್ಕಿಂತ ಹೆಚ್ಚಾಗಿರಲಾರದು. ಆದರೆ, ಆರನೇ ಪಂಚವಾರ್ಷಿಕ ಯೋಜನೆಯಲ್ಲಿ ಕೈಗಾರಿಕಾಭಿವೃದ್ಧಿಯಲ್ಲಿ ಶೇ. 7ರಷ್ಟು ವಾರ್ಷಿಕ ಹೆಚ್ಚಳವನ್ನು ನಿರೀಕ್ಷಿಸಲಾಗಿದೆ. ಇದು ಸಾಧಿಸಲಾಗದ ಗುರಿಯೇ ಸರಿ. ಕೈಗಾರಿಕಾ ಉತ್ಪಾದನಾ ಸೂಚಿಯು (1970 = 100) ಏಪ್ರಿಲ್-ಜುಲೈ 1978ರಲ್ಲಿ 145.1 ಆಗಿದ್ದು, ಏಪ್ರಿಲ್-ಜುಲೈ 1979ರಲ್ಲಿ 144.2ಕ್ಕೆ ಇಳಿದಿದೆ. ಉಕ್ಕು, ಕಬ್ಬಿಣ, ಸಕ್ಕರೆ, ಬಟ್ಟೆ, ಮುಂತಾದವುಗಳ ಉತ್ಪಾದನೆಯು ಈ ವರುಷ ಗಣನೀಯವಾಗಿ ಕಡಿಮೆಯಾಗಿದೆ. ಆರ್ಥಿಕ ಹಿಂಜರಿತದ ಸಂಭವವು ಈಗಾಗಲೇ ದಟ್ಟವಾಗಿರುವುದರಿಂದ, ಈ ಹಣಕಾಸಿನ ವರ್ಷವಿಡೀ ಕೈಗಾರಿಕಾಭಿವೃದ್ಧಿಯು ಕಳೆದ ವರ್ಷಕ್ಕಿಂತಲೂ ಇಳಿಮುಖವಾಗುವುದು.

ಮುಂಬರುವ ಆರ್ಥಿಕ ಹಿಂಜರಿತವು ದೇಶದಲ್ಲಿ ಆರ್ಥಿಕ ಯೋಜನೆ ಪ್ರಾರಂಭವಾದಂದಿನಿಂದ ಮೊತ್ತ ಮೊದಲು ಭಾರೀ ದೊಡ್ಡ ಪ್ರಮಾಣದ್ದಾಗುವುದೆಂದು ನಿರೀಕ್ಷಿಸಲಾಗಿದೆ. ಹಿಂದೆ 1975-76ರಲ್ಲಿ ಕೈಗಾರಿಕಾ ಕ್ಷೇತ್ರವು ಮಾರುಕಟ್ಟೆ ಇಲ್ಲದೆ ಹಿಂಜರಿತವನ್ನು ಅನುಭವಿಸಿತ್ತು. ಆದರೆ, ಅದು ಹೆಚ್ಚು ದೀರ್ಘಕಾಲ ಉಳಿಯಲಿಲ್ಲ ಮತ್ತು ಆಗ ಕೈಗಾರಿಕಾ ಉತ್ಪಾದನೆ ಇಳಿಮುಖವಾಗಲಿಲ್ಲ. ಸಧ್ಯದ ಆರ್ಥಿಕ ಹಿಂಜರಿತವು ದೀರ್ಘ ಕಾಲ ಉಳಿಯಬಹುದು ಮತ್ತು ಕೈಗಾರಿಕಾ ಉತ್ಪಾದನೆಯಲ್ಲಿ ಗಣನೀಯವಾಗಿ ಇಳಿಮುಖವಾಗಬಹುದು.

**ಕಾರ್ಮಿಕರ ಮಹಾ ವಿಪತ್ತು:**

ಆರ್ಥಿಕ ಹಿಂಜರಿತದಿಂದಾಗಿ ಸಣ್ಣ ಹಾಗೂ ಮಧ್ಯಮ ಮಟ್ಟದ ಕೈಗಾರಿಕಾ ಸಂಸ್ಥೆಗಳು ಭಾರೀ ನಷ್ಟವನ್ನನುಭವಿಸುವವು. ಇಲ್ಲಿನ ಕಾರ್ಮಿಕರು ಕೆಲಸ ಕಳೆದುಕೊಳ್ಳುವರು. ಅವರ ಗ್ರಾಹಕ ಶಕ್ತಿಯು ಇನ್ನಷ್ಟು ಕಡಿಮೆಯಾಗುವುದು. ಗುತ್ತೇದಾರಿ ಕೈಗಾರಿಕಾ ಸಂಸ್ಥೆಗಳು ಕಾರ್ಖಾನೆಗಳನ್ನು ಮುಚ್ಚುವುದು, ಕೆಲಸಗಾರರನ್ನು ಕೆಲಸದಿಂದ ತೆಗೆದುಹಾಕುವುದು, ಕೆಲಸಗಾರರ ಶ್ರಮಭಾರ ಹೆಚ್ಚಿಸುವುದು, ಆಧುನೀಕರಣ ಮತ್ತು ಯಾಂತ್ರೀಕರಣಗೊಳಿಸುವುದು, ಇತ್ಯಾದಿ ಕ್ರಮಗಳನ್ನು ತಮ್ಮ ನಷ್ಟ ಭರತಿ ಮಾಡಿಕೊಳ್ಳಲು, ಮಾರುಕಟ್ಟೆಯನ್ನು ಮರಳಿ ಪಡೆಯಲು ಕೈಗೊಳ್ಳುವವು. ಸಂಘಟಿತ ಕಾರ್ಮಿಕರು ಇಂತಹ ಕ್ರಮಗಳನ್ನು ಮುಷ್ಕರ ಹೋರಾಟಗಳಿಂದ ಪ್ರತಿಭಟಿಸಿದರೆ, ಸರಕಾರದ ನೆರವಿನಿಂದ ಮುಷ್ಕರ ಮುರಿಯುವುದು, ಲಾಕ್‌ಔಟ್ ಸಾರುವುದು, ಇತ್ಯಾದಿ ಪ್ರತೀಕಾರ ಕ್ರಮಗಳನ್ನು ಕೈಗೊಳ್ಳುವವು. ಕಾರ್ಮಿಕರ ವೇತನ ಹಾಗೂ ಜೀವನಮಟ್ಟವು ಹದಗೆಡುವುದು, ಆರ್ಥಿಕ ಹಿಂಜರಿತವು ಕಾರ್ಮಿಕರ ಪಾಲಿಗೆ ಒಂದು ಮಹಾ ವಿಪತ್ತು!

ಆರ್ಥಿಕ ಹಿಂಜರಿತದಿಂದಾಗಿ ಉತ್ಪಾದಕರೇ ತಮ್ಮ ಗ್ರಾಹಕಶಕ್ತಿ ಕಳೆದುಕೊಂಡು ತಾವೇ ಉತ್ಪಾದಿಸಿದ ಜೀವನಾವಶ್ಯಕ ವಸ್ತುಗಳನ್ನು ಕೊಂಡುಕೊಳ್ಳಲು ಅಶಕ್ತರಾಗುವರು!

**ಬೆಲೆಏರಿಕೆ, ಹಣದುಬ್ಬರ:**

ಸಾಂಪ್ರದಾಯಕ ಬಂಡವಾಳಶಾಹಿ ಪದ್ಧತಿಯಲ್ಲಿ ಆರ್ಥಿಕ ಹಿಂಜರಿತ ಉಂಟಾದಾಗ ಬೆಲೆಗಳೂ ಇಳಿಮುಖವಾಗುವವು. ಆದರೆ, ಸರಕಾರಿ ನಿಯಂತ್ರಿತ ಆಧುನಿಕ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯಲ್ಲಿ ಆರ್ಥಿಕ ಹಿಂಜರಿತದೊಂದಿಗೇ ಬೆಲೆಏರಿಕೆಯು ಹಾಗೂ ಹಣದುಬ್ಬರದ ಬೇಗುದಿಯೂ ಸೇರಿರುವುದು. ಸಗಟು ವ್ಯಾಪಾರದ ಬೆಲೆಸೂಚಿಯು (1970-71 = 100) 1976-77ರಲ್ಲಿ 188.7 ಇದ್ದುದು, ಮಾರ್ಚ್ '79ರಲ್ಲಿ 189ಕ್ಕೇರಿ, ಮುಂದೆ ಜೂನ್ '79ರಲ್ಲಿ 201.3ಕ್ಕೇರಿ, ನವೆಂಬರ್ '79ರಷ್ಟರಲ್ಲಿ 222.6ಕ್ಕೆ ನೆಗೆಯಿತು! ಇದೇ ರಭಸದಲ್ಲಿ ಅಖಿಳ ಭಾರತ ಕೈಗಾರಿಕಾ ಕಾರ್ಮಿಕರಿಗೆ ಸಂಬಂಧಿಸಿದ ಗ್ರಾಹಕರ ಬೆಲೆ ಸೂಚಿಯು (1960 = 100) ಜುಲೈ '79ರಲ್ಲಿ 330 ಇದ್ದುದು ನವೆಂಬರ್ '79ರಷ್ಟರಲ್ಲಿ 365ಕ್ಕೇರಿತು! ಅದೇ ಸೂಚ್ಯಂಕವು (1949 = 100) ಈ ಅವಧಿಯಲ್ಲಿ 401 ರಿಂದ 444ಕ್ಕೇರಿತು! 1979ರ ಅಂತ್ಯದಲ್ಲಿ ಹಣದುಬ್ಬರದ ದರವು ಶೇ. 20ಕ್ಕೂ ಮೀರಿತು.

ಹಿಂದೆ 1972-73ರಿಂದ 1974-75ರ ವರೆಗಿನ ಮೂರು ವರ್ಷದ ಅವಧಿಯಲ್ಲಿಯೂ ವಿಪರೀತ ಹಣದುಬ್ಬರವಿತ್ತು. ಆಗ ಮೂರು ವರ್ಷಗಳಿಂದ ಸತತವಾಗಿ ಮಳೆ ಇಲ್ಲದೆ, ಬರಗಾಲ ಉಂಟಾಗಿ, ಕೃಷಿ ಉತ್ಪಾದನೆ ಗಣನೀಯವಾಗಿ ಕುಸಿದಿದ್ದುದರಿಂದ ಬೆಲೆಏರಿಕೆ ಹಾಗೂ ಹಣದುಬ್ಬರ ಉಂಟಾಯಿತು. ಮೊದಲ ಎರಡು ವರ್ಷಗಳಲ್ಲಿ ಕೃಷಿ ಉತ್ಪನ್ನಗಳ ಬೆಲೆಗಳ ಏರಿಕೆಯು ಕೈಗಾರಿಕಾ ಉತ್ಪಾದನೆಗಳ ಬೆಲೆಗಳ ಏರಿಕೆಗಿಂತ ಹೆಚ್ಚಾಗಿತ್ತು. ಮೂರನೇ ವರ್ಷ ಮಾತ್ರ ಕೈಗಾರಿಕಾ ಉತ್ಪಾದನೆಗಳ ಬೆಲೆಏರಿಕೆಯು ಕೃಷಿ ಉತ್ಪನ್ನಗಳ ಬೆಲೆಏರಿಕೆಯನ್ನು ಮೀರಿಸಿ ಮುಂದುವರಿಯಿತು. ಆದರೆ, ಸಧ್ಯದ ಹಣದುಬ್ಬರ ಪ್ರಾರಂಭವಾದದ್ದೇ ಕೈಗಾರಿಕಾ ವಸ್ತುಗಳ ಬೆಲೆಏರಿಕೆಯಿಂದ.

ಸತತವಾಗಿ ಕೃತಕ ಹಣ ಸೃಷ್ಟಿ ಮಾಡುತ್ತಿದ್ದುದರಿಂದಲೂ, ಅನುತ್ಪಾದಿತ ವಿಷಯಗಳಿಗೆ ವಿಪರೀತ ಖರ್ಚು ಮಾಡುತ್ತಿದ್ದುದರಿಂದಲೂ, ಫೆಬ್ರುವರಿ '79ರ ಮುಂಗಡ ಪತ್ರದಲ್ಲಿ ಭಾರೀ ಪ್ರಮಾಣದ ಖೋತಾ ತೋರಿಸಿದುದರಿಂದಲೂ, ಎಲ್ಲಾ ಜೀವನಾವಶ್ಯಕ ವಸ್ತುಗಳ ಮೇಲೆ ವಿಪರೀತ ಅಪ್ರತ್ಯಕ್ಷ ತೆರಿಗೆಗಳನ್ನು ಹೇರಿದುದರಿಂದಲೂ, ಮುಂದೆ ಪೆಟ್ರೋಲಿಯಂ ಪದಾರ್ಥಗಳಿಗೂ, ಕಲ್ಲಿದ್ದಲು, ಉಕ್ಕು, ಕಾಗದ, ಸಿಮೆಂಟ್, ಬಟ್ಟೆ, ಸಕ್ಕರೆ ಮುಂತಾದ ಕೈಗಾರಿಕಾ ಮೂಲವಸ್ತುಗಳಿಗೆ ಸರಕಾರ ಬೆಲೆ ಏರಿಸಿದುದರಿಂದಲೂ, ಸಗಟು ವ್ಯಾಪಾರದ ಬೆಲೆ ಸೂಚಿಯು ನಾಗಾಲೋಟದಲ್ಲಿ ಏರಲಾರಂಭಿಸಿತು. ಫೆಬ್ರವರಿ '79ರಿಂದ ಜೂನ್ '79ರಷ್ಟರಲ್ಲಿಯೇ ಈ ಬೆಲೆ ಸೂಚಿಯು ಶೇ. 10.4ರಷ್ಟು ಏರಿತು.

**ಬರಗಾಲ, ಕೃಷಿ ಉತ್ಪಾದನೆಯಲ್ಲಿ ಇಳಿಮುಖ:**

1979-80ರ ಮುಂಗಡ ಪತ್ರ ಮಂಡಿಸಿದ ಚರಣಸಿಂಗ್‌ರ ತೆರಿಗೆ ಧೋರಣೆಗಳಿಂದಾಗಿ ಶೇ. 1ಕ್ಕಿಂತ ಹೆಚ್ಚು ಬೆಲೆಏರಿಕೆ ಆಗಲಾರದೆಂದು ಹಣಕಾಸು ಮಂತ್ರಿ ಶಾಖೆಯ ವಕ್ತಾರರು ಭರವಸೆ ನೀಡಿದ್ದರು. ಆಹಾರ ಧಾನ್ಯಗಳ ಸಂಗ್ರಹವು ಆಗ 21 ಮಿ. ಟನ್‌ಗಳಷ್ಟಿದ್ದುದರಿಂದಲೂ, ವಿದೇಶಿ ವಿನಿಮಯ ಸಂಗ್ರಹ ರೂ. 5000 ಕೋಟಿಯಷ್ಟಿದ್ದುದರಿಂದಲೂ, ಬೆಲೆಗಳನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಬಹುದೆಂದು ಧೃಡ ವಿಶ್ವಾಸ ತಾಳಲಾಗಿತ್ತು. ಆದರೆ ಬೆಲೆಗಳು ಯಾರ ನಿಯಂತ್ರಣವೂ ಇಲ್ಲದೆ ಏರತೊಡಗಿದವು. 1979ರಲ್ಲಿ ರಫ್ತು ವ್ಯಾಪಾರ ಇಳಿಮುಖವಾಗುತ್ತಿದ್ದು, ಆಮದು ವ್ಯಾಪಾರ ಹೆಚ್ಚತೊಡಗಿದ್ದು, ವಿದೇಶಿ ವಿನಿಮಯ ಸಂಗ್ರಹವೂ ಇಳಿಮುಖವಾಗುವ ಸಂಭವವಿದೆ. ತೈಲಗಳ ಬೆಲೆಗಳು ಏರುತ್ತಿರುವುದರಿಂದ, ಅವುಗಳ ಆಮದಿಗೇ ಅರ್ಧಾಂಶ ರಫ್ತು ಗಳಿಕೆಯೂ ಮೀಸಲಾಗುತ್ತಿದೆ. ವಿದೇಶಿ ವಿನಿಮಯ ಮತ್ತು ಆಹಾರ ಸಂಗ್ರಹಗಳು ಸಧ್ಯದಲ್ಲಿಯೇ ಕರಗಲಿವೆ.

ಇಷ್ಟರಲ್ಲಿ 1979ರ ಮುಂಗಾರು ಮಳೆ ಸಮರ್ಪಕವಾಗಿಲ್ಲದೆ, ಬಿಹಾರ, ರಾಜಸ್ಥಾನ, ಮಧ್ಯಪ್ರದೇಶ, ಮಹಾರಾಷ್ಟ್ರ, ಆಂಧ್ರಪ್ರದೇಶದ ಸುಮಾರು 30 ಕೋಟಿ ಜನರು ಭೀಕರ ಬರಗಾಲಕ್ಕೆ ತುತ್ತಾಗಿದ್ದಾರೆ. ಇಂತಹ ಬರಗಾಲ ಸುಮಾರು ನೂರು ವರುಷಗಳಿಂದ ಬರಲಿಲ್ಲ ಎನ್ನುತ್ತಾರೆ. ಪರಿಣಾಮವಾಗಿ ಖರೀಫ್ ಬೆಳೆ 1978ರಲ್ಲಿ 78.7 ಮಿ. ಟನ್ ಇದ್ದುದು 1979ರಲ್ಲಿ ಸುಮಾರು 9 ಮಿ. ಟನ್‌ಗಳಷ್ಟು ಕಡಿಮೆ ಆದೀತೆಂದು ಅಂದಾಜು ಮಾಡಲಾಗಿದೆ. ಕಬ್ಬಿನ ಬೆಳೆ ಬಹಳ ಕಡಿಮೆಯಾಗಿದೆ. ಖಾದ್ಯ ತೈಲ ಬೀಜಗಳ ಬೆಳೆಯೂ ಕುಸಿದಿದೆ. ಈಗಾಗಲೇ ಹಣ್ಣು, ತರಕಾರಿ, ಆಹಾರಧಾನ್ಯ, ಖಾದ್ಯತೈಲ, ಸಕ್ಕರೆ ಮುಂತಾದ ಕೃಷಿ ಉತ್ಪನ್ನಗಳ ಬೆಲೆಗಳು ಏರತೊಡಗಿವೆ. ಕೃಷಿ ಉತ್ಪನ್ನಗಳ ಕೊರತೆಯಿಂದಾಗಿ ಕೈಗಾರಿಕಾ ಉತ್ಪಾದನೆಗೂ ಧಕ್ಕೆ ಉಂಟಾಗಿ, ಕೈಗಾರಿಕಾ ಬೆಲೆಗಳು ಇನ್ನಷ್ಟು ಹೆಚ್ಚುವವು. ಉರಿಯುವ ಬೆಂಕಿಗೆ ಗಾಳಿ ಬೀಸಿದಂತಾಗುವುದು!

**ಬಂಡವಾಳಶಾಹಿ ಪದ್ಧತಿಯ ಅಸಹಾಯಕತೆ:**

'ಆರ್ಥಿಕ ಹಿಂಜರಿತ' ಮತ್ತು 'ಹಣದುಬ್ಬರ' ಸಮಸ್ಯೆಗಳನ್ನು ಸರಕಾರಿ ಹಸ್ತಕ್ಷೇಪದಿಂದ ಪರಿಹರಿಸಬಹುದೆಂದು ಜಾಗತಿಕ ಯುದ್ಧಾನಂತರ ಬಂಡವಾಳಶಾಹಿ ರಾಷ್ಟ್ರಗಳ ನಂಬಿಕೆಯಾಗಿತ್ತು. ಆದರೆ, ಈ ದೇಶಗಳಲ್ಲಿ ಒಂದಾದ ಮೇಲೊಂದು ಆರ್ಥಿಕ ದುಃಸ್ಥಿತಿಗಳು ಬಂದೊದಗುತ್ತಿರುವುದರಿಂದ ಸರಕಾರಿ ಹಸ್ತಕ್ಷೇಪದಿಂದ ಸಮಸ್ಯೆಗಳನ್ನು ಪರಿಹರಿಸುವ ಕಲ್ಪನೆ ಕನಸಾಗಿಯೇ ಉಳಿದಿದೆ. ಇದೇ ಅನುಭವ ಅಭಿವೃದ್ಧಿ ಹೊಂದುತ್ತಿರುವ ಭಾರತದಂತಹ ಬಂಡವಾಳಶಾಹಿ ದೇಶಕ್ಕೂ ಈಗ 30 ವರ್ಷಗಳಿಂದ ಆಗುತ್ತಿದೆ.

ಸರಕಾರ ಅಸಹಾಯಕ ಸ್ಥಿತಿಯಲ್ಲಿದೆ. 'ಆರ್ಥಿಕ ಹಿಂಜರಿತ'ವನ್ನು ನಿವಾರಿಸಲು ಜನರ ಗ್ರಾಹಕ ಶಕ್ತಿಯನ್ನು ಹೆಚ್ಚಿಸಲು ಸಾರ್ವಜನಿಕ ವೆಚ್ಚವನ್ನು ಹೆಚ್ಚಿಸಿದರೆ, ಹಣದುಬ್ಬರ ಇನ್ನಷ್ಟು ಹೆಚ್ಚುವುದು. ಕಾರಣ ಸಾರ್ವಜನಿಕ ವೆಚ್ಚಕ್ಕೆ ಸಂಪನ್ಮೂಲಗಳನ್ನು ಸಾರ್ವಜನಿಕ ಸಾಲ ಎತ್ತುವುದರಿಂದಲೂ, ಕೃತಕ ಹಣ ಸೃಷ್ಟಿಸುವುದರಿಂದಲೂ, ಅಪ್ರತ್ಯಕ್ಷ ತೆರಿಗೆ ಹೇರುವುದರಿಂದಲೂ ಹಣದ ಚಲಾವಣೆ ಹೆಚ್ಚುವುದು, ಹಣದುಬ್ಬರ ಉಂಟಾಗಿ ಜನರ ಗ್ರಾಹಕ ಶಕ್ತಿಯು ಕ್ಷಯಿಸುವುದು. ಸಟ್ಟಾ ವ್ಯಾಪಾರಗಳೂ ಅಕ್ರಮ ದಾಸ್ತಾನುಗಳೂ ಹೆಚ್ಚುವುವು. ಶ್ರೀ ಸಾಮಾನ್ಯರ ಗ್ರಾಹಕ ಶಕ್ತಿಯು ಕುಂಠಿತವಾಗಿ ಕೃಷಿ ಮತ್ತು ಕೈಗಾರಿಕೆಗಳ ಉತ್ಪಾದನೆಗಳಿಗೆ ಮಾರುಕಟ್ಟೆ ಇಲ್ಲದೆ ಆರ್ಥಿಕ ಹಿಂಜರಿತ ಮರುಕಳಿಸುವುದು. ಸಾಲ ನಿಯಂತ್ರಣ ಮಾಡಿದರೆ, ಸಣ್ಣ ಹಾಗೂ ಮಧ್ಯಮ ಮಟ್ಟದ ಕೈಗಾರಿಕಾ ಸಂಸ್ಥೆಗಳೇ ಆರ್ಥಿಕ ಮುಗ್ಗಟ್ಟಿನಿಂದ ದಿವಾಳಿಯಾಗುವುವು, ಆರ್ಥಿಕ ಹಿಂಜರಿತ ಇನ್ನಷ್ಟು ಉಲ್ಬಣಗೊಳ್ಳುವುದು. ಕಾರ್ಮಿಕರ, ನೌಕರರ ವೇತನ ಸ್ಥಗಿತಗೊಳಿಸಿದರೂ, ಗ್ರಾಹಕಶಕ್ತಿ ಕ್ಷಯಿಸಿ ಮಾರುಕಟ್ಟೆ ಬರಿದಾಗುವುದು.

ಆಂತರಿಕ ಮಾರುಕಟ್ಟೆ ಕ್ಷಯಿಸುತ್ತಿರುವಾಗ ಬಂಡವಾಳಶಾಹಿಗಳೂ ಭೂಮಾಲಕರೂ ತಮ್ಮ ಲಾಭಕ್ಕಾಗಿ ವಿದೇಶಿ ಮಾರುಕಟ್ಟೆಗೆ ಮೊರೆ ಹೋಗುವರು. ಆದರೆ ಜಾಗತಿಕ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯೂ ಭೀಕರವಾದ ಆರ್ಥಿಕ ಹಿಂಜರಿತವನ್ನು ಅನುಭವಿಸುತ್ತಿರುವಾಗ ಭಾರತವೇ ತನ್ನ ಅಂತರಾಷ್ಟ್ರೀಯ ಮಾರುಕಟ್ಟೆಗಳನ್ನು ಕಳೆದುಕೊಳ್ಳುತ್ತಿದೆ. ವಿದೇಶಿ ಬಂಡವಾಳಶಾಹಿಗಳೂ, ಬಹುರಾಷ್ಟ್ರೀಯ ಸಂಸ್ಥೆಗಳೂ ತಮ್ಮ ಸಾಲ, ನೆರವು, ಬಂಡವಾಳಗಳಿಂದ ಭಾರತದ ಆಂತರಿಕ ಮಾರುಕಟ್ಟೆಯನ್ನು ಆಕ್ರಮಿಸುತ್ತಿರುವರು!

**ಇಂದಿರಾ ಹೊಸ ಸರಕಾರ ಏನು ಮಾಡುವುದು?**

ಈಗ ತಾನೇ ನಡೆದ ಲೋಕಸಭಾ ಚುನಾವಣೆಯಲ್ಲಿ ಇಂದಿರಾ ಕಾಂಗ್ರೆಸ್

[7ನೇ ಪುಟ ನೋಡಿ]

# ಮುಖಸ್ತುತಿ ಮಾಡುವ ಮುಖ್ಯ ಪತ್ರಿಕೆಗಳ ಹೆದರಿಕೆ

ಇಂದಿರಾಗಾಂಧಿಯವರನ್ನು ಮತ್ತೆ ಅಧಿಕಾರಕ್ಕೆ ತರಲು ಹಾಗೂ ದೇಶದಲ್ಲಿ ಏಕಪಕ್ಷದ ಅಧಿಕಾರವಿರಬೇಕೆಂದು ಬಯಸುವ ಬೂರ್ಜ್ವಾ ಪತ್ರಿಕೆಗಳ ಒಂದು ವಿಭಾಗ ಲೋಕಸಭಾ ಚುನಾವಣೆಗಳ ಫಲಿತಾಂಶ ಹೊರಬಿದ್ದ ನಂತರ ಅತಿ ಉತ್ಸಾಹದಿಂದ ಏನೇನೋ ಬರೆಯುತ್ತಿದ್ದಾರೆ. 'ಟೈಮ್ಸ್ ಆಫ್ ಇಂಡಿಯಾ' ಮತ್ತದರ ಸಹ ಪ್ರಕಾಶನದ ಪತ್ರಿಕೆಗಳು ಕಾಂಗ್ರೆಸ್ (ಐ) ಪಕ್ಷದ ಗೆಲುವಿನಿಂದ ಅವರಿಗಾಗಿರುವ ರೋಮಾಂಚಕಾರಿ ಆನಂದವನ್ನು ವ್ಯಕ್ತಪಡಿಸಿರುವುದಲ್ಲದೆ, ವಿರೋಧ ಪಕ್ಷಗಳ ಸದಸ್ಯರ ಸಂಖ್ಯೆ ಸೊರಗಿ ಹೋಗಿರುವುದರ ಬಗ್ಗೆ ಹರ್ಷವನ್ನು ವ್ಯಕ್ತಪಡಿಸಿವೆ. ಅಲ್ಲದೆ ಬಲವಾದ ಎಡಪಕ್ಷಗಳ ವಿರೋಧಿ ಕೂಟವೊಂದು ಅಸ್ತಿತ್ವಕ್ಕೆ ಬಂದಿರುವುದರ ವಿರುದ್ಧ ಸಹಾ ಈ ಪತ್ರಿಕೆಗಳು ಕೆಟ್ಟ ರೀತಿಯಲ್ಲಿ ಅಪಪ್ರಚಾರ ಮಾಡುತ್ತಿವೆ. ದೇಶದಲ್ಲಿ ಎಡಶಕ್ತಿಗಳ ಐಕ್ಯತೆಗೆ ಬೆನ್ನೆಲುಬಾಗಿರುವ ಸಿ. ಪಿ. ಐ. (ಎಂ) ಪಕ್ಷದ ಮೇಲೆ ಇಂತಹ ಅಪಪ್ರಚಾರಗಳನ್ನು ಸತತವಾಗಿ ಮಾಡುತ್ತಿವೆ.

'ದಿ ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯ ಸಂಪಾದಕರು ಮತ್ತು ಕಾಲಮಿಸ್ಟರು ಯಾವ ನಾಚಿಕೆಯೂ ಇಲ್ಲದೆ ಒಬ್ಬ ವ್ಯಕ್ತಿಯ, ಒಂದೇ ಪಕ್ಷದ ಅಧಿಕಾರವನ್ನು ದೇಶದಲ್ಲಿ ಸ್ಥಾಪಿಸಲು ನಡೆಸುತ್ತಿರುವ ಪ್ರಚಾರದ ಅತಿ ಉತ್ಸಾಹವನ್ನು ನೋಡಿದರೆ, ತಲೆ ಸರಿಯಾಗಿರುವ ಯಾರೂ ಇದನ್ನು ಇಷ್ಟಪಡುವುದಿಲ್ಲ. ಈ ಪತ್ರಿಕೆಯ ಗೌರವಾನ್ವಿತ ಸಂಪಾದಕ ಮಹಾಶಯರಿಗೆ ದಿವಂಗತ ಜವಾಹರಲಾಲ್‌ರವರನ್ನು ಸಾಮ್ರಾಟರೆಂದೂ, ಅವರ ಮಗಳು ಶ್ರೀಮತಿ ಇಂದಿರಾಗಾಂಧಿಯವರನ್ನು ಸಾಮ್ರಾಜ್ಞಿ ಎನ್ನುವುದು ಅಸಹ್ಯವಾದ ಮುಖಸ್ತುತಿ ಎನ್ನುವುದೂ ತಲೆಗೆ ಹೊಳೆದಿಲ್ಲ. "ಭಾರತದ ಜನತೆ ನೆಹರೂರವರನ್ನು "ಸಾಮ್ರಾಟ" ರಂತೆ ಕಂಡಿದ್ದಾರೆ" ಎಂದು ಬರೆಯುವ ಸಂಪಾದಕರು ಶ್ರೀಮತಿ ಗಾಂಧಿಯವರನ್ನೂ ಅದೇ ದೃಷ್ಟಿಯಿಂದ ನೋಡುತ್ತಾರೆ. ಮಾನ್ಯ ಸಂಪಾದಕರ ಅಭಿಪ್ರಾಯದಲ್ಲಿ 1977ರ ಮಾರ್ಚ್ ಚುನಾವಣೆಗಳಲ್ಲಿ "ಜನತೆ ತಮ್ಮ ಸಾಮ್ರಾಜ್ಞಿ ಶ್ರೀಮತಿ ಗಾಂಧಿ ಮತ್ತವರ ಪ್ರಾಮಾಣಿಕ, ಅಪ್ರಮಾಣಿಕ ಆಸ್ಥಾನಿಕರನ್ನು ಅಧಿಕಾರದಿಂದ ಇಳಿಸಿದರು. ಇದಕ್ಕೆ ಕಾರಣ ಜನತೆ ತಮ್ಮನ್ನು ಆಳುವ ಶ್ರೀಮತಿ ಗಾಂಧಿಯವರು ದಯೆ ಮತ್ತು ನ್ಯಾಯ ರೀತಿಯಲ್ಲಿ ಆಡಳಿತ ನಡೆಸುತ್ತಿಲ್ಲವೆಂದು ಭಾವಿಸಿದ್ದು. ಆದ್ದರಿಂದಲೇ ಜನ ಫಕೀರ ಶ್ರೀ ಜಯಪ್ರಕಾಶ ನಾರಾಯಣರನ್ನು ಅಧಿಕಾರಕ್ಕೆ ಆರಿಸಿದರು." ಜನತಾಪಕ್ಷದ ಚುನಾವಣೆಯಿಂದ ಗಡಿಯಾರದ ಲೋಲಕವು ಕಾಂಗ್ರೆಸ್ (ಐ) ಕಡೆ ಹಿಂದಕ್ಕೆ ಹೋಗಿದೆ ಎಂದು ಬರೆಯುವ ಪತ್ರಿಕೆಯ ಅಭಿಪ್ರಾಯದಲ್ಲಿ "ದೇಶಕ್ಕೆ ಬದಲಿಯಾದ, ಅಮೂಲ್ಯವಾದ ಕೇಂದ್ರ ರಾಜಕೀಯ ಶಕ್ತಿಯೊಂದು ಸಿಗಬೇಕಾದರೆ, ಅದನ್ನು ಶ್ರೀಮತಿ ಗಾಂಧಿಯವರು ಮಾತ್ರ ನೀಡಬಲ್ಲರು." ಜೊತೆಗೆ "ಬಲಿಷ್ಠ ವ್ಯಕ್ತಿತ್ವ"ವಿರುವ ಶ್ರೀಮತಿ ಗಾಂಧಿಯವರ ನೇತೃತ್ವದ ಏಕ ಪಕ್ಷದ ಗುತ್ತೇದಾರಿ ಅಧಿಕಾರವಿದ್ದರೆ ಮಾತ್ರ ದೇಶ ಪ್ರಗತಿಹೊಂದಲು ಸಾಧ್ಯ ಏಕೆಂದರೆ ಎರಡು ರಾಜಕೀಯ ಪಕ್ಷಗಳು ಇರುವ ಪದ್ಧತಿಯನ್ನೂ ಈ ದೇಶ ತಡೆಯಲಾರದು ಎಂದಿದ್ದಾರೆ.

ಉದ್ದೇಶಪೂರ್ವಕವಾಗಿಯೋ ಮತ್ತಾವುದೋ ದೃಷ್ಟಿಯಿಂದಲೋ ಮಾನ್ಯ ಸಂಪಾದಕರು "ಬಲಿಷ್ಠ ವ್ಯಕ್ತಿತ್ವ"ದ ವ್ಯಕ್ತಿ ಮಾಡಿದ ತುರ್ತು ಪರಿಸ್ಥಿತಿಯ ಅತಿರೇಕಗಳನ್ನು ತಮ್ಮ ನೆನಪಿನಿಂದ ಅಳಿಸಿ ಹಾಕಿದ್ದಾರೆ. ತನಗೆ "ಸಶಕ್ತ, ಸುಭದ್ರ ಸರಕಾರವನ್ನು ಉಂಟುಮಾಡಲು ಸಾವಿರಾರು ಜನರನ್ನು ಜೈಲಿಗೆ ಹಾಕಿ, ಚಿತ್ರಹಿಂಸೆ ಕೊಟ್ಟು, ಬಲವಂತದ ಸಂತಾನ ಹರಣ ಶಸ್ತ್ರ ಚಿಕಿತ್ಸೆ ಮಾಡಿದ್ದಲ್ಲದೆ, ಮನಸ್ಸಿಗೆ ಬಂದಂತೆ ಜನಗಳನ್ನು ನಿರ್ದಾಕ್ಷಿಣ್ಯವಾಗಿ ಕೊಲ್ಲಲಾಯಿತು. ಒಂದು ವಿಷಯಕ್ಕೆ ಪತ್ರಿಕೆಯ ಸಂಪಾದಕರಿಗೆ ವಂದನೆಗಳನ್ನು ತಿಳಿಸಬೇಕಾಗಿದೆ, ಏನೆಂದರೆ ನೆಹರೂರವರಿಂದ ಪ್ರಾರಂಭಿಸಿರುವ ಸಾಮ್ರಾಜ್ಯವಾದಿ ವಂಶಾವಳಿಯನ್ನು ತುರ್ತುಪರಿಸ್ಥಿತಿ ಸಮಯದ[illegible] ಹಾಗೂ ನಂತರ ಪತ್ರಿಕೆಗಳು ಮತ್ತು ಕಾನೂನಿಗೆ ಸ್ವಲ್ಪವೂ ಗೌರವ ಕೊಡದೆ ದುಷ್ಟಕೂಟದ ಮುಖಂಡ ಸಂಜಯಗಾಂಧಿಗೆ ವಿಸ್ತರಿಸದಿರುವುದು.

ಇವೆಲ್ಲಾ ವಿಷಯಗಳನ್ನು ಸಂಪಾದಕರು ಮರೆತಿದ್ದರೂ ಅವರ ಪವಾಡ ನಾಯಕಿಯನ್ನು ಇತ್ತೀಚಿನ ಚುನಾವಣೆಗಳಲ್ಲಿ ನೂರಕ್ಕೆ 57ರಷ್ಟು ಜನರು ತಿರಸ್ಕರಿಸಿದ್ದಾರೆ ಎಂಬುದನ್ನಂತೂ ಬಹುಶಃ ಇವರು ಮರೆತಿರಲಾರರು. ಒಂದು ಪಕ್ಷದ, ಒಬ್ಬ ವ್ಯಕ್ತಿಯ ನಾಯಕತ್ವವನ್ನು ಪ್ರತಿಪಾದಿಸುವ ಈ ಪತ್ರಿಕೆಯ ಕಾಲಂಗಳು ಈ ಅಸಹ್ಯ ವರದಿಯ ಜೊತೆ ಎಡ ವಿರೋಧ ಪಕ್ಷವನ್ನು ಖಂಡಿಸುವ ಕೆಲಸವನ್ನೂ ಮಾಡುತ್ತಿದೆ. 11ನೇ ಜನವರಿ 1980ರಂದು 'ದಿ ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯು ಒಂದು ಸುದ್ದಿಯನ್ನು ಸಂತೋಷ, ಆರ್ಭಟಗಳಿಂದ ಪ್ರಕಟಿಸಿದೆ. ಎಡ ಪಕ್ಷಗಳ ವಿರುದ್ಧ ಅಪಪ್ರಚಾರ ಮಾಡುವುದರ ಜೊತೆ "ಚುನಾವಣಾ ಫಲಿತಾಂಶಗಳು ಎಡ ಪಕ್ಷಗಳ ಕಪಾಳಕ್ಕೆ ಹೊಡೆದಂತಿವೆ", ಇವುಗಳ ಚುನಾವಣಾ ತಂತ್ರಗಳೆಲ್ಲಾ ವಿಫಲವಾಗಿದೆ, ಮೂರು ವರ್ಷ ತಾವು ದೊಡ್ಡ ಶಕ್ತಿ ಎಂದು ಪ್ರಚಾರ ಪಡೆದ ಎಡಪಕ್ಷಗಳನ್ನು ಆಕಾರಕ್ಕೆ ಸರಿಯಾಗಿ ಕತ್ತರಿಸಿ, ನೀವು ಉಪಶಕ್ತಿ ಮಾತ್ರ ಎಂಬುದನ್ನು ಜನಗಳು ತೋರಿಸಿದ್ದಾರೆ". ಈ "ಪ್ರಗತಿಪರ" ಹಾಗೂ "ಪ್ರಜಾಪ್ರಭುತ್ವವಾದಿ" ವರದಿಗಾರ ಪ. ಬಂಗಾಳ, ತ್ರಿಪುರಾ, ಕೇರಳ ಹಾಗೂ ದೇಶದ ಮತ್ತಿತರ ಭಾಗಗಳಲ್ಲಿ ಎಡ ಪಕ್ಷಗಳು ಗೆದ್ದಿರುವುದನ್ನು ಕಂಡು ತಲೆತಿರುಗುವಂತಾಗಿ "ಭಾರತೀಯ ಮತದಾರರು ಶ್ರೀಮತಿ ಗಾಂಧಿಯವರ ಪವಾಡ ಸದೃಶ ನಾಯಕತ್ವ ಹಾಗೂ ಒಂದು ಪಕ್ಷದ ಆಡಳಿತವನ್ನು ಒಪ್ಪಿಕೊಂಡಿದ್ದಾರೆ" ಎಂದಿದ್ದಾರೆ.

ಬಿರ್ಲಾರವರ ತುತ್ತೂರಿ 'ದಿ ಹಿಂದುಸ್ತಾನ್ ಟೈಮ್ಸ್' ಪತ್ರಿಕೆ ಚುನಾವಣೆಗೆ ಮೊದಲು ಜನತಾಪಕ್ಷ ಮತ್ತದರ ಮುಖಂಡ ಜಗಜೀವನರಾಂರವರಿಗೆ ಕಾಂಗ್ರೆಸ್ (ಐ) ಜೊತೆ ಚೌಕಾಶಿ ಮಾಡಲು ಸಾಧ್ಯವಾಗುವಂತೆ ಮಾಡಿದ ಪತ್ರಿಕೆ ಸಹಾ ಎಡ ಪಕ್ಷಗಳ ವಿರುದ್ಧ ಅದರಲ್ಲೂ ಸರ್ವಾಧಿಕಾರ ಮತ್ತು ಜಾತೀಯವಾದವನ್ನು ವಿರೋಧಿಸಲು ಸಾಕಷ್ಟು ಶಕ್ತಿ ನೀಡಿದ ಸಿ ಪಿ ಐ(ಎಂ) ವಿರುದ್ಧ ಅಪಸ್ವರ ಪ್ರಾರಂಭ ಮಾಡಿದೆ. "ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಮೊರಾರ್ಜಿ ಸರಕಾರವನ್ನು ಉರುಳಿಸಲು ತಂತ್ರ ಮಾಡಿ, ಜನತಾದಿಂದ ಬೇರ್ಪಟ್ಟ ಗುಂಪನ್ನು ಬೆಂಬಲಿಸಿ ಹುಟ್ಟಿಸಲು ಪ್ರಯತ್ನಿಸಿದ 'ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿ'ಗಳ ಕೂಟವು ಪಕ್ಷಕ್ಕೆ ಯಾವುದೇ ಲಾಭವನ್ನು ತರಲಿಲ್ಲ"ವೆಂದು ವರದಿ ಮಾಡಿದೆ.

ಜನತಾ ಪಕ್ಷದ ಸರಕಾರ ಉರುಳಿದ್ದಕ್ಕಾಗಿ ಮೊಸಳೆ ಕಣ್ಣೀರು ಸುರಿಸುವ ಪತ್ರಿಕೆ, ಸಿ.ಪಿ.ಐ.(ಎಂ) ಪಕ್ಷವು ಸರಕಾರಕ್ಕೆ ತನ್ನ ಬೆಂಬಲವನ್ನು ವಾಪಸು ತೆಗೆದುಕೊಳ್ಳುವ ಮೊದಲೇ, ಆಡಳಿತದಲ್ಲಿ ಆರೆಸ್ಸೆಸ್-ಜನಸಂಘಗಳ ಪ್ರಾಬಲ್ಯ, ಜನವಿರೋಧಿ ನೀತಿಗಳ ಅನುಸರಣೆ ಹಾಗೂ ಸರಿಯಾದ ಆಡಳಿತವನ್ನು ನೀಡುವಲ್ಲಿ ವಿಫಲವಾದದ್ದರಿಂದ ಮೊರಾರ್ಜಿಯವರ ಸರಕಾರ ಜನತೆಯ ವಿಶ್ವಾಸವನ್ನು ಕಳೆದುಕೊಂಡಿರುತ್ತೆಂಬುದನ್ನು ಅರಿಯಬೇಕು. ಆರೆಸ್ಸೆಸ್-ಜನಸಂಘಗಳ ಪ್ರಾಬಲ್ಯದಿಂದ ಜನತಾಪಕ್ಷ ಚುನಾವಣೆಗೆ ಮೊದಲೇ ಕುಸಿಯುತ್ತಿತ್ತು. ಇದು ಸಂಪೂರ್ಣ ನಿಜವೆಂಬುದಾಗಿ ಚುನಾವಣಾ ಫಲಿತಾಂಶಗಳು ಸ್ಪಷ್ಟಪಡಿಸಿವೆ.

ಹೀಗೆ 'ದಿ ಟೈಮ್ಸ್ ಆಫ್ ಇಂಡಿಯಾ' ಮತ್ತು 'ದಿ ಹಿಂದುಸ್ತಾನ್ ಟೈಮ್ಸ್' ಪತ್ರಿಕೆಗಳೆರಡೂ ಏಳನೇ ಲೋಕಸಭಾ ಚುನಾವಣೆಯಲ್ಲಿ ಎಡ ಪಕ್ಷಗಳು ಗಳಿಸುವ ಸ್ಥಾನ ಮತ್ತು ಸಿ ಪಿ ಐ(ಎಂ)ನ ಚುನಾವಣಾ ತಂತ್ರದ ಬಗ್ಗೆ ಚಿಂತೆ ವ್ಯಕ್ತಪಡಿಸಿವೆ. ಎಡ ಪಕ್ಷಗಳ ವಿಜಯ ಮುಖ್ಯವಾಗಿ ಕೇರಳ, ಬಂಗಾಳ ಮತ್ತು ತ್ರಿಪುರಾ ರಾಜ್ಯಗಳಿಗೆ ಸೀಮಿತವಾಗಿರುವುದಕ್ಕೆ ಸಂತೋಷಗೊಂಡಿವೆ. ಆದರೆ, ಸಿ.ಪಿ.ಐ(ಎಂ) ಪಕ್ಷವು ಎಡಪಕ್ಷಗಳ ಬೆನ್ನೆಲುಬಾಗಿ ಬಂದಿರುವುದಲ್ಲದೆ, ಎಡ ಮತ್ತು ಪ್ರಜಾಸತ್ತಾತ್ಮಕ ದಿಕ್ಕಿನಲ್ಲಿ ಯೋಚಿಸುವ ಅಪಾರ ಜನತೆಯಲ್ಲಿ ವಿಶ್ವಾಸವನ್ನು ಹಾಗೂ ಬದಲಿಯಾದ ಪ್ರಜಾಸತ್ತಾತ್ಮಕ ಹಾದಿಯ ಬೆಳವಣಿಗೆಗಾಗಿ ಹೋರಾಟ ನಡೆಸುವ ನಂಬಿಕೆಯನ್ನು ಹುಟ್ಟಿಸಿರುವುದಕ್ಕೆ ದುಃಖವಾಗಿದೆ.

'ದಿ ಹಿಂದುಸ್ತಾನ್ ಟೈಮ್ಸ್' ಪತ್ರಿಕೆಯ ಸಂಪಾದಕರಿಗೆ ಕಿರಿಕಿರಿ ಉಂಟುಮಾಡಿ, ಸಂಪಾದಕೀಯದಲ್ಲಿ ಈ ರೀತಿ ಬರೆಯುವಂತೆ ಮಾಡಿದೆ : "ಪ್ರಜಾಸತ್ತೆಗೆ ಜಾತೀಯವಾದಿ ಶಕ್ತಿಗಳಿಗಿಂತ, ಸರ್ವಾಧಿಕಾರಿ ಶಕ್ತಿಗಳೇ ಹೆಚ್ಚು ಗಂಡಾಂತರಕಾರಿ ಎಂಬುದಾಗಿ ಸಿ.ಪಿ.ಐ (ಎಂ) ಪ. ಬಂಗಾಳ ಶಾಖೆಯ ಸಿದ್ಧಾಂತವನ್ನು ಪೊಲಿಟ್‌ಬ್ಯೂರೋ ಪುನರ್‌ವಿಮರ್ಶಿಸಬೇಕು ಹಾಗೂ ಪಕ್ಷದ ವಿಸ್ತೃತ ಸಭೆಗಳಲ್ಲಿ ಚರ್ಚಿಸಬೇಕು ಎಂಬುದರಿಂದ ಕೆಲವು ಸೂಚನೆಗಳು ಸಿಕ್ಕಿದಂತಾಗಿದೆ."

ಕಾಂ. ಜ್ಯೋತಿ ಬಸುರವರ ಹೇಳಿಕೆಯನ್ನು ಟೀಕೆ ಮಾಡುತ್ತಾ 'ದಿ ಟೈಮ್ಸ್ ಆಫ್ ಇಂಡಿಯಾ'ದ ವಿದೇಶ ವರದಿಗಾರ ಹೀಗೆ ಬರೆದಿದ್ದಾನೆ. "ಇದು ಪಕ್ಷದಲ್ಲಿ ಹೊಸ ಬಿಕ್ಕಟ್ಟನ್ನು ಉಂಟುಮಾಡಿದೆ. ಪೊಲಿಟ್‌ಬ್ಯೂರೋ ಸದಸ್ಯರತ್ತ ಇದು ಪ್ರಥಮ ಗುಂಡಾಗಿದೆ. ಕಳೆದ ವರ್ಷ ಜುಲೈನಲ್ಲಿ ದೇಶದ ಪ್ರಜಾಸತ್ತೆಗೆ ಸರ್ವಾಧಿಕಾರಿ ಮತ್ತು ಜಾತೀಯವಾದಿ ಶಕ್ತಿಗಳಿಂದ ಸಮಾನವಾದ ಅಪಾಯವಿದೆ ಎಂದು ಘೋಷಣೆ ನೀಡಿ ಮೊರಾರ್ಜಿ ಸರಕಾರವನ್ನು ಉರುಳಿಸಲು ಉಳಿದವರು ತೀರ್ಮಾನ ತೆಗೆದುಕೊಳ್ಳುವಂತೆ ಮಾಡಿದರು. ರಾಜ್ಯದ ಸೆಕ್ರೆಟಾರಿಯೆಟ್ ಮತ್ತು ರಾಜ್ಯ ಸಮಿತಿ ಈ ವಿವಾದಗ್ರಸ್ತ ವಿಷಯವನ್ನು ಗಮನಕ್ಕೆ ತೆಗೆದುಕೊಂಡು ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ಮಟ್ಟದಲ್ಲಿ ಈ ವಿಷಯ ಚರ್ಚೆಯಾಗುವಂತೆ ಕೇಳಿಕೊಳ್ಳಲು ನಿರ್ಧರಿಸಿದೆ".

ಸ್ವಾರಸ್ಯಕರ ಸಂಗತಿಯೆಂದರೆ ಗುತ್ತೇದಾರರ ಹಿಡಿತದಲ್ಲಿರುವ ಎರಡು ಪತ್ರಿಕೆಗಳು ತದ್ವಿರುದ್ಧವಾದ ಹಿತಾಸಕ್ತಿಗಳನ್ನು ಹೊಂದಿರುವುದು. 'ದಿ ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಗೆ ಜನತಾ ಸರಕಾರ ಉರುಳುವುದು ಬೇಕಾಗಿದ್ದರೆ, 'ದಿ ಹಿಂದುಸ್ತಾನ್ ಟೈಮ್ಸ್' ಪತ್ರಿಕೆಗೆ ಜನತಾಪಕ್ಷದ ಸರಕಾರವನ್ನು ಉಳಿಸುವುದು ಮತ್ತು ಬೆಂಬಲಿಸುವುದರಲ್ಲಿ ಆಸಕ್ತಿ. ಈ ಎರಡೂ ಪತ್ರಿಕೆಗಳಿಗೆ 1979ರ ಜನತಾ ಬಿಕ್ಕಟ್ಟಿನಿಂದ ಸಿ.ಪಿ.ಐ.(ಎಂ) ರಾಜಕೀಯ ನಿಲುಮೆ ಸರಿಯಾಗಿದೆಯಾ ಎನ್ನುವುದರ ಬಗ್ಗೆ ಚಿಂತೆ. 1979ರ ಜುಲೈ-ಆಗಸ್ಟ್ ತಿಂಗಳಲ್ಲಿ ಇವೇ "ಸ್ನೇಹಮೂಲ"ಗಳು ಪಕ್ಷದಲ್ಲಿ "ಆಂತರಿಕ ಬಿಕ್ಕಟ್ಟು" ಮತ್ತು "ಆಂತರಿಕ ವಾದ, ವಿವಾದ"ಗಳ ಬಗ್ಗೆ ಊಹೆಗಳನ್ನು ಹಬ್ಬಿಸಿದವರೆಂಬುದು ನಮಗೆ ಗೊತ್ತು. ಆದರೆ ನಂತರ ನಡೆದದ್ದು ಊಹೆಗೆ ತದ್ವಿರುದ್ಧವಾದದ್ದು. ಪೊಲಿಟ್‌ಬ್ಯೂರೋ ಮತ್ತು ಕೇಂದ್ರ ಸಮಿತಿ ಸಭೆ ಸೇರಿ ಪ್ರತಿಯೊಂದು ವಿಷಯವನ್ನೂ ಕೂಲಂಕುಷವಾಗಿ ಚರ್ಚಿಸಿ ಸಾಮೂಹಿಕ ತೀರ್ಮಾನದ ಮೇಲೆ ಚುನಾವಣಾ ತಂತ್ರವನ್ನು ರೂಪಿಸಲಾಗಿತ್ತು. ಆದರೂ ದೊಡ್ಡ ದೊಡ್ಡ ಬೂರ್ಜ್ವಾ ಪತ್ರಿಕೆಗಳು ಇನ್ನೂ ದೊಡ್ಡ "ಆಂತರಿಕ ವಿವಾದಗಳು" ಮತ್ತು "ಆಂತರಿಕ ಬಿಕ್ಕಟ್ಟನ್ನು" ಸಿ. ಪಿ. ಐ. (ಎಂ) ಪಕ್ಷದಲ್ಲಿ ಮುಂದೆ ಉಂಟಾಗುವುದೆಂದು ಕಾತರದಿಂದ ಕಾಯುತ್ತಿದ್ದಾರೆ. ಪಕ್ಷದ 'ಆಂತರಿಕ ಪ್ರಜಾಪ್ರಭುತ್ವ' ಮತ್ತು 'ಸರಿಯಾದ ರಾಜಕೀಯ ನಿಲುಮೆ'ಯ ಬಗ್ಗೆ ಅವರಿಗಿರುವ ಕಳಕಳಿಯ ಬಗ್ಗೆ ವಂದಿಸುತ್ತಾ, ಅವರಿಗೆ ನಾವು ತಿಳಿಸಲು ಇಷ್ಟಪಡುವುದೇನೆಂದರೆ ಸಿ. ಪಿ. ಐ. (ಎಂ) ಪಕ್ಷದಲ್ಲಿ ಕಿತ್ತಾಟ, ಗುಂಪುಗಾರಿಕೆ, ವಿಭಜನೆಗಳನ್ನು ನಿರೀಕ್ಷಿಸುತ್ತಾ "ಮೂರ್ಖರಸ್ವರ್ಗದಲ್ಲಿಉಳಿಯಬೇಡಿ" ಎಂದಷ್ಟೇ ಹೇಳಬಯಸುತ್ತೇವೆ. ಸಿ. ಪಿ. ಐ.(ಎಂ)ಪೊಲಿಟ್‌ಬ್ಯೂರೋ, ಕೇಂದ್ರ ಸಮಿತಿ ಮತ್ತು ಕೆಳಗಿನ ಸಮಿತಿಗಳ ನಾಯಕತ್ವಕ್ಕೆ ಆಗಿಂದಾಗ್ಗೆ ಬರುವ ವಿಷಯಗಳನ್ನು, ಸಮಸ್ಯೆಗಳನ್ನು ಚರ್ಚಿಸಿ ತೀರ್ಮಾನಕ್ಕೆ ಬರುವಷ್ಟು ತಿಳುವಳಿಕೆ ಇದೆ. ಇದಕ್ಕಾಗಿ ನಾವು ಭಾರಿ ಬೂರ್ಜ್ವಾಸಿ ಮತ್ತದರ ಪತ್ರಿಕೆಗಳ ಹಣಕ್ಕಾಗಿ ಬರೆಯುವ ಪಂಡಿತರ ಉಪದೇಶ ಪಡೆಯಬೇಕಾಗಿಲ್ಲ. ಕಳೆದ ಹತ್ತು ವರ್ಷಗಳಿಂದ ಸಿ. ಪಿ. ಐ. (ಎಂ)ನ ರಾಜಕೀಯ ಧೋರಣೆಯು ಇಂದಿರಾ ಮತ್ತು ಜನತಾ ಗಾಳಿಯನ್ನು ತಡೆದು, ದೇಶದಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ

(5ನೇ ಪುಟ ನೋಡಿ)

# ದೊಡ್ಡನಂದಿ ಎಸ್ಟೇಟ್ ಕಾರ್ಮಿಕರ ಸಭೆ

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನಲ್ಲಿರುವ ದೊಡ್ಡನಂದಿ ಎಸ್ಟೇಟ್ ಕಾರ್ಮಿಕರ ಸಭೆಯು ತಾ. 19-1-80 ರಂದು ದೊಡ್ಡನಂದಿಯಲ್ಲಿ ಶ್ರೀ ಶೀನರವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ತೋಟದಲ್ಲಿ ಕಾರ್ಮಿಕರಿಗೆ ಕೈಗಾರಿಕಾವಾರು ಒಪ್ಪಂದದ ಪ್ರಕಾರ ಸಂಬಳವೇ ಸಿಗುತ್ತಿರಲಿಲ್ಲ. ಈ ಕಾರ್ಮಿಕರು ಒಗ್ಗಟ್ಟಾಗಿ ತಾ. 25-12-79 ರಿಂದ 3-1-80ರ ತನಕ ಮುಷ್ಕರ ನಡೆಸಿದ ನಂತರ ಮಾಲೀಕರು ಕೈಗಾರಿಕಾವಾರು ಒಪ್ಪಂದ ಪ್ರಕಾರ ಸಂಬಳ ಕೊಡಲು ಸಮ್ಮತಿಸಿದರು. ಆದರೆ, ವಯಸ್ಕ ಮಕ್ಕಳಿಗೆ ಮತ್ತು ಇತರ ಮಕ್ಕಳಿಗೆ ಮಾಲೀಕರು ಕೈಗಾರಿಕಾವಾರು ಒಪ್ಪಂದದ ಪ್ರಕಾರ ಇನ್ನೂ ಸಂಬಳ ಕೊಡದಿರುವ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಯ್ತು. ಹೆರಿಗೆ ಭತ್ತೆ, ಬೋನಸ್, ಮೊದಲಾದ ಪ್ರಶ್ನೆಗಳನ್ನು ಚರ್ಚಿಸಲಾಯ್ತು.

ಸಿ. ಐ. ಟಿ. ಯು. ಕರ್ನಾಟಕ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿಯಾದ ಕಾಂ. ಸಿ. ನಂಜುಂಡಪ್ಪನವರು ಮಾತನಾಡಿ, ಕಾರ್ಮಿಕರು ಸಂಘಟಿತರಾಗಿ ಐಕ್ಯಹೋರಾಟವನ್ನು ನಡೆಸುವುದರ ಮೂಲಕ ತಮ್ಮ ನ್ಯಾಯಸಮ್ಮತವಾದ ಬೇಡಿಕೆಗಳನ್ನು ಈಡೇರಿಸಿಕೊಳ್ಳಬಹುದೆಂಬುದನ್ನು ಈ ಪ್ರದೇಶದಲ್ಲಿ ದೊಡ್ಡನಂದಿ ಎಸ್ಟೇಟ್ ಕಾರ್ಮಿಕರು ತೋರಿಸಿಕೊಟ್ಟಿದ್ದಾರೆ ಎಂದು ಹೇಳಿ, ಸುತ್ತಮುತ್ತಲ ತೋಟಗಳಲ್ಲಿರುವ ಅಸಂಘಟಿತ ತೋಟ ಕಾರ್ಮಿಕರನ್ನು ಸಂಘಟಿಸಲು ದೊಡ್ಡನಂದಿ ಎಸ್ಟೇಟ್ ಕಾರ್ಮಿಕರು ಮುಂದಾಗಬೇಕೆಂದು ಕರೆಯಿತ್ತರು.

ಸಭೆಯಲ್ಲಿ ಕರ್ನಾಟಕ ಪ್ರೊವಿನ್ಷಿಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ನಿನ ಉಪಾಧ್ಯಕ್ಷರಾದ ಕಾಂ. ಎ. ಸಿ. ಕೇಶವ, ಸಂಘಟಕ ಕಾಂ. ಕೆ. ರಾಮದಾಸ್ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯ ಕಾಂ. ಅಪ್ಪು ಸಭೆಯಲ್ಲಿ ಉಪಸ್ಥಿತರಿದ್ದರು.

●

## ಎಡರಂಗ ಅಭ್ಯರ್ಥಿಗೆ ಅತಿಹೆಚ್ಚು ಮತ

ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆಯಲ್ಲಿ ಅತಿ ಹೆಚ್ಚಿನ ಮತ ಗಳಿಸಿದ ಅಭ್ಯರ್ಥಿ ಸಿ.ಪಿ.ಐ(ಎಂ)ನ ಕಾಂ. ನಿರೇನ್ ಘೋಷ್. ಪ. ಬಂಗಾಳದ ಡಂಡಂ ಕ್ಷೇತ್ರದಿಂದ ಆಯ್ಕೆಯಾಗಿರುವ ಕಾಂ. ನಿರೇನ್‌ಘೋಷ್ 3ಲಕ್ಷ, 68ಸಾವಿರ, 240 ಮತಗಳು ಸಿಕ್ಕಿದವು.

ಏಳನೇ ಲೋಕಸಭಾ ಚುನಾವಣೆಯಲ್ಲಿ ಅತಿಹೆಚ್ಚಿನ ಮತಗಳನ್ನು ಗಳಿಸಿದ ಹತ್ತು ಅಭ್ಯರ್ಥಿಗಳ ಪೈಕಿ, ಏಳು ಜನ ಅಭ್ಯರ್ಥಿಗಳು ಪ. ಬಂಗಾಳದವರು. ಈ ಎಲ್ಲಾ ಅಭ್ಯರ್ಥಿಗಳೂ ಎಡರಂಗಕ್ಕೆ ಸೇರಿದವರು ಅಥವಾ ಬೆಂಬಲ ಪಡೆದವರು.

* * *

1980ರ ಲೋಕಸಭಾ ಚುನಾವಣೆಯಲ್ಲಿ ಸಿ.ಪಿ.ಐ(ಎಂ) 62 ಸ್ಥಾನಗಳಿಗೆ ಸ್ಪರ್ಧಿಸಿ, 35 ಸ್ಥಾನಗಳನ್ನು ಪಡೆದುಕೊಂಡಿತು. ಸೋತ 27 ಸ್ಥಾನಗಳ ಪೈಕಿ 17 ಸ್ಥಾನಗಳಲ್ಲಿ ಅದು ಎರಡನೇ ಸ್ಥಾನ ಪಡೆದಿದೆ. 14 ಕ್ಷೇತ್ರಗಳಲ್ಲಿ 1 ಲಕ್ಷಕ್ಕೂ ಹೆಚ್ಚು ಮತಗಳನ್ನು ಪಡೆದಿದ್ದು, ಕೇವಲ ಒಂಭತ್ತು ಕ್ಷೇತ್ರಗಳಲ್ಲಿ ಠೇವಣಿ ಕಳೆದುಕೊಂಡಿದೆ. ●

## ಏಳನೆಯ ಲೋಕಸಭೆಗೆ ಎಸ್. ಎಫ್. ಐ. ಮುಖಂಡರುಗಳ ಆಯ್ಕೆ

ಏಳನೆಯ ಲೋಕಸಭೆಗೆ ನಡೆದ ಚುನಾವಣೆಯಲ್ಲಿ ಎಡಪಕ್ಷಗಳ ಬೆಂಬಲದಿಂದ ಭಾರತ ವಿದ್ಯಾರ್ಥಿ ಫೆಡರೇಷನ್ನಿನ (ಎಸ್. ಎಫ್. ಐ.) ಇಬ್ಬರು ಮುಖಂಡರುಗಳು ಆಯ್ಕೆಯಾಗಿದ್ದಾರೆ.

ಕೇರಳ ರಾಜ್ಯದ ಒಟ್ಟಪ್ಪಾಲಮ್ ಮೀಸಲು ಕ್ಷೇತ್ರದಿಂದ ಎಸ್. ಎಫ್. ಐ. ಕೇರಳ ರಾಜ್ಯ ಸಮಿತಿಯ ಕಾರ್ಯದರ್ಶಿ ಕಾಂ. ಎ. ಕೆ. ಬಾಲನ್‌ರವರು ಚುನಾಯಿತರಾಗಿದ್ದಾರೆ. ಪಶ್ಚಿಮ ಬಂಗಾಳದ ಕಟ್ವಾ ಕ್ಷೇತದಿಂದ ಕಲ್ಕತ್ತ ಯೂನಿವರ್ಸಿಟಿ ಸ್ಟೂಡೆಂಟ್ಸ್ ಯೂನಿಯನ್ ಪ್ರಧಾನ ಕಾರ್ಯದರ್ಶಿ ಕಾಂ. ಸೈಫುದ್ದೀನ್ ಚೌಧರಿಯವರು ಚುನಾಯಿತರಾಗಿದ್ದಾರೆ. ಇವರಿಬ್ಬರೂ ಎಸ್. ಎಫ್. ಐ. ಕೇಂದ್ರ ಸಮಿತಿಯ ಸಹಕಾರ್ಯದರ್ಶಿಗಳೂ ಸಹ ಆಗಿದ್ದಾರೆ.

ಲೋಕಸಭೆಯಲ್ಲೇ ಅತಿ ಕಡಿಮೆ ವಯಸ್ಸಿನ ಸದಸ್ಯರಾಗಿರುವ ಕೇವಲ 26 ವರ್ಷ ವಯಸ್ಸಿನ ಈ ನವತರುಣರು ರಾಷ್ಟ್ರದ ವಿದ್ಯಾರ್ಥಿ ಚಳುವಳಿಗೆ ಹೊಸ ಸ್ಫೂರ್ತಿಯನ್ನು ತಂದಿದ್ದಾರೆ. ಇದುವರೆವಿಗೂ ಉದಾಸೀನ ಮಾಡಲಾಗಿದ್ದ ದೇಶದ ವಿದ್ಯಾರ್ಥಿ ಮತ್ತು ಯುವಜನತೆಯ ಸಮಸ್ಯೆಗಳ ಪರಿಹಾರಕ್ಕಾಗಿ ಸಂಘಟಿಸುತ್ತಿರುವ ಐಕ್ಯಹೋರಾಟದ ಕೂಗು ಲೋಕಸಭೆಯಲ್ಲಿ ಪ್ರತಿಧ್ವನಿಸುವ ಭರವಸೆ ಇವರ ಆಯ್ಕೆಯಿಂದ ದೊರೆತಂತಾಗಿದೆ. ಸ್ವಾತಂತ್ರ್ಯಾನಂತರದ ಮೂರು ದಶಕಗಳ ಕಾಂಗ್ರೆಸ್ ಮತ್ತು ಜನತಾ ಪಕ್ಷಗಳ ಬಂಡವಾಳಶಾಹಿ ಪರ ಆಡಳಿತದಿಂದಾಗಿ ದುಬಾರಿ ವಿದ್ಯಾಭ್ಯಾಸ, ನಿರುದ್ಯೋಗ ಮುಂತಾದ ಸಮಸ್ಯೆಗಳ ಬಿಸಿಯಿಂದಾಗಿ ನಿರಾಶರಾಗಿರುವ ಯುವಜನತೆಗೆ ಇವರಿಬ್ಬರೂ ಆಶಾಕಿರಣಗಳಾಗಿ ಬೆಳಗುವ ಜೋಡಿ ನಕ್ಷತ್ರಗಳಾಗಲೆಂದು ಆಶಿಸುತ್ತಾ, ಈ ವಿಜೇತರಿಗೂ ಚುನಾಯಿಸಿದ ಪ್ರಬುದ್ಧ ಮತದಾರರಿಗೂ ಎಸ್. ಎಫ್. ಐ. ಕರ್ನಾಟಕ ರಾಜ್ಯಸಮಿತಿಯು ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತದೆ.

○

## ಪ.ಬಂಗಾಳ ಎಡರಂಗದ ಗಮನಾರ್ಹ ವಿಜಯ

ಪ. ಬಂಗಾಳದಲ್ಲಿ ಸ್ಪರ್ಧಿಸಿದ್ದ 30 ಲೋಕಸಭಾ ಸ್ಥಾನಗಳ ಪೈಕಿ 27 ಸ್ಥಾನಗಳನ್ನು ಪಡೆದುಕೊಂಡ ಸಿ. ಪಿ. ಐ. (ಎಂ) ಪಕ್ಷವು ರಾಜ್ಯದಲ್ಲಿ ಚಲಾವಣೆಯಾದ ಒಟ್ಟು ಮತಗಳಲ್ಲಿ ಶೇಕಡ 39.42 ಮತಗಳನ್ನು ಪಡೆದಿದೆ. ನಲ್ವತ್ತು ಸ್ಥಾನಗಳಿಗೆ ಸ್ಪರ್ಧಿಸಿ ನಾಲ್ಕು ಸ್ಥಾನಗಳನ್ನು ಪಡೆದ ಇಂದಿರಾ ಕಾಂಗ್ರೆಸ್ ಶೇಕಡ 36.45 ಮತಗಳನ್ನು ಪಡೆದಿದೆ.

ಸ್ವಾರಸ್ಯವೆಂದರೆ ಕಾಂಗ್ರೆಸ್ (ಐ) ಗಿಂತ ಹತ್ತು ಕಡಿಮೆ ಸ್ಥಾನಗಳಿಗೆ ಸ್ಪರ್ಧಿಸಿದ್ದ ಸಿ. ಪಿ. ಐ. (ಎಂ) ಇಂದಿರಾ ಕಾಂಗ್ರೆಸ್‌ಗಿಂತ ಶೇಕಡ 3ರಷ್ಟು ಹೆಚ್ಚು ಮತಗಳನ್ನು ಪಡೆದಿದೆ.

ಪ್ರತಿಯೊಬ್ಬ ಸಿ. ಪಿ. ಐ. (ಎಂ) ಅಭ್ಯರ್ಥಿ ಗಳಿಸಿದ ಸರಾಸರಿ ಓಟಿನ ಸಂಖ್ಯೆ 2, 63, 563. ಕಾಂಗ್ರೆಸ್ಸಿನವರು ಗಳಿಸಿದ ಸರಾಸರಿ ಓಟುಗಳಿಗಿಂತ 80, 773ರಷ್ಟು ಹೆಚ್ಚು ಮತಗಳನ್ನು ಸಿ. ಪಿ. ಐ. (ಎಂ) ಅಭ್ಯರ್ಥಿಗಳು ಪಡೆದಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿಗಳು ಗಳಿಸಿದ ಸರಾಸರಿ ಮತಗಳ ಸಂಖ್ಯೆ 1, 82, 790.

41 ಸ್ಥಾನಗಳಿಗೆ ಸ್ಪರ್ಧಿಸಿದ್ದ ಎಡರಂಗ ಸರಕಾರ 37 ಸ್ಥಾನಗಳಲ್ಲಿ ಜಯಗಳಿಸಿತಲ್ಲದೆ, ಶೇಕಡ 53.79 ರಷ್ಟು ಮತಗಳನ್ನು ಪಡೆಯಿತು. ತಲಾ ನಾಲ್ಕು ಸ್ಥಾನಗಳಿಗೆ ಸ್ಪರ್ಧಿಸಿದ್ದ ಆರ್.ಎಸ್.ಪಿ., ಫಾರ್ವರ್ಡ್ ಬ್ಲಾಕ್ ಮತ್ತು ಮೂರು ಸ್ಥಾನಗಳಿಗೆ ಸ್ಪರ್ಧಿಸಿದ್ದ ಸಿ. ಪಿ .ಐ. ಅನುಕ್ರಮವಾಗಿ ಶೇಕಡ 5.33, 4.66 ಹಾಗೂ 4. 38ರಷ್ಟು ಮತಗಳನ್ನು ಪಡೆದಿವೆ.

ಕಾಂಗ್ರೆಸ್ (ಐ) ಅಲೆಯನ್ನು ಬಂಗಾಳದ ಬಾಗಿಲಲ್ಲೇ ತಡೆದ ಎಡರಂಗ 1977ರ ವಿಧಾನಸಭಾ ಚುನಾವಣೆಗಳಲ್ಲಿ ಪಡೆದ ಓಟುಗಳಿಗಿಂತ ಅಧಿಕ ಮತಗಳನ್ನು ಈ ಬಾರಿ ಪಡೆದಿದೆ. ವಿಧಾನಸಭಾ ಚುನಾವಣೆಗಳಲ್ಲಿ ಸಿ. ಪಿ. ಐ. (ಎಂ), ಆರ್.ಎಸ್.ಪಿ. ಮತ್ತು ಫಾರ್ವರ್ಡ್ ಬ್ಲಾಕ್ ಮೂರು ಪಕ್ಷಗಳೂ ಸೇರಿ ಶೇಕಡ 45ರಷ್ಟು ಮತಗಳನ್ನು ಪಡೆದಿದ್ದವು. ಈ ಬಾರಿ ಮತದಾನದ ಸಂಖ್ಯೆ ಅಧಿಕವಾಗಿದ್ದರೂ, ಎಡರಂಗ ಶೇಕಡ 49.42 ರಷ್ಟು ಮತಗಳನ್ನು ಗಳಿಸಿದೆ.

1977ರಲ್ಲಿ ಚಲಾವಣೆಯಾದ ಒಟ್ಟು ಮತಗಳ ಶೇಕಡಾವಾರು ಸಂಖ್ಯೆ 60.24. 1980ರಲ್ಲಿ ಒಟ್ಟು ಮತದಾರರ ಸಂಖ್ಯೆ 28.9 ಮಿಲಿಯನ್ ಮತ್ತು ಚಲಾವಣೆಯಾದ ಮತಗಳ ಶೇಕಡಾವಾರು ಸಂಖ್ಯೆ 70.09.

ಒಂದು ಸ್ಥಾನವನ್ನೂ ಪಡೆಯದ ಜನತಾಪಕ್ಷ 35 ಸ್ಥಾನಗಳಿಗೆ ಸ್ಪರ್ಧಿಸಿತ್ತು. ಅದರ 33 ಅಭ್ಯರ್ಥಿಗಳು ಠೇವಣಿ ಕಳೆದುಕೊಂಡರು. ಶೇಕಡಾ 4.64ರಷ್ಟು ಮತಗಳನ್ನು ಪಡೆಯಿತು. ಸ್ಪರ್ಧಿಸಿದ್ದ 18 ಸ್ಥಾನಗಳಲ್ಲೂ ಠೇವಣಿ ಕಳೆದುಕೊಂಡ ಕಾಂಗ್ರೆಸ್ (ಯು) ಶೇಕಡ 1.22 ಮತಗಳನ್ನು ಪಡೆಯಿತು. 17 ಸ್ಥಾನಗಳಿಗೆ ಸ್ಪರ್ಧಿಸಿ, ಎಲ್ಲಾ ಕಡೆಯೂ ಠೇವಣಿ ಕಳೆದುಕೊಂಡ ಲೋಕದಳ ಶೇಕಡ 0.51 ರಷ್ಟು ಮತಗಳನ್ನು ಪಡೆದಿದೆ. ●

## ಮೈಲಿಮನೆ ಎಸ್ಟೇಟ್ ಕಾರ್ಮಿಕರ ಸಭೆ

ಚಿಕ್ಕಮಗಳೂರು ತಾಲ್ಲೂಕಿನಲ್ಲಿರುವ ಮೈಲಿಮನೆ ಎಸ್ಟೇಟ್ ಕಾರ್ಮಿಕರ ಸಭೆಯು ಕರ್ನಾಟಕ ಪ್ರೊವಿನ್ಷಿಯಲ್ ಪ್ಲಾಂಟೇಷನ್ ಯೂನಿಯನ್ನಿನ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಮೈಂದ ಮೇಸ್ತ್ರಿಯವರ ಅಧ್ಯಕ್ಷತೆಯಲ್ಲಿ ತಾ. 20-1-80 ರಂದು ಸಂಜೆ ನಡೆಯಿತು. ಸಿ. ಐ. ಟಿ. ಯು. ಕರ್ನಾಟಕ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಸಿ. ನಂಜುಂಡಪ್ಪನವರು ಸಭೆಯನ್ನುದ್ದೇಶಿಸಿ ಮಾತನಾಡಿದರು. ಸಂಘದ ಸಂಘಟಕರಾದ ಕಾಂ. ಕೆ. ರಾಮದಾಸ್ ಸಭೆಯಲ್ಲಿ ಉಪಸ್ಥಿತರಿದ್ದರು.

ಆಡಳಿತ ಮಂಡಳಿಯು ಕಾಫಿ ಹಣ್ಣು ಕೊಯ್ಯುವ ಈ ಕಾಲದಲ್ಲಿ ಹಣ್ಣು ಕೊಯ್ಯುವ ಕೆಲಸವನ್ನು ಖಾಯಂ ಕೆಲಸಗಾರರಿಗೆ ಕೊಡದೆ ಹೊರಗಿನವರಿಗೆ ಕೊಡುತ್ತಿರುವುದು, ಈ ವಿಷಯವಾಗಿ ಇರುವ ಕೈಗಾರಿಕಾವಾರು ಒಪ್ಪಂದದ ವಿರುದ್ಧವಾಗಿದೆಯೆಂದು, ಒಂದು ದಿವಸದ ಹಾಜರಿಗೆ 46 ಕೆ. ಜಿ. ಕಾಫಿ ಹಣ್ಣನ್ನು ಲೆಕ್ಕ ಹಿಡಿಯಬೇಕೆಂದು ಒಪ್ಪಂದದಲ್ಲಿದ್ದರೂ, ಆಡಳಿತ ಮಂಡಳಿಯು ಒಂದು ದಿವಸದ ಹಾಜರಿಗೆ 48 ಕೆ.ಜಿ. ಲೆಕ್ಕ ಹಿಡಿಯುತ್ತಿರುವುದರಿಂದ ಕಾರ್ಮಿಕರ ಮೇಲೆ ಶ್ರಮಭಾರವನ್ನು ಹೆಚ್ಚು ಮಾಡಿದಂತಾಗುವುದೆಂದು, ಈ ದಿಸೆಯಲ್ಲಿ ಆಡಳಿತ ಮಂಡಳಿಯ ಮೇಲೆ ಕ್ರಮ ಜರುಗಿಸಬೇಕೆಂದು ಸಭೆಯು ತೀರ್ಮಾನವಾಡಿತು. ●

## ಕಾಫಿಲ್ಯಾಂಡ್ಸ್ ಕಂಪೆನಿಯ ಕಾರ್ಮಿಕರಿಗೆ ಶೇ. 20 ಬೋನಸ್ಸು ಸಿಗುತ್ತದೆ

ತಾ. 3-12-79ರಂದು ಚಿಕ್ಕಮಗಳೂರಿನಲ್ಲಿ ನಡೆದ ಕರ್ನಾಟಕ ಪ್ರೊವಿನ್ಷಿಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ನಿನ ಕಾರ್ಯಕಾರಿ ಸಮಿತಿಯ ವಿಸ್ತೃತ ಸಭೆಯು, 1978-79ರ ಸಾಲಿಗೆ ತೋಟಕಾರ್ಮಿಕರಿಗೆ ಶೇ.20 ಬೋನಸ್ ಸಿಗಬೇಕೆಂದು ಬೇಡಿಕೆಯನ್ನಿಟ್ಟು ತೋಟಗಳ ಆಡಳಿತ ಮಂಡಳಿಗಳಿಗೆ ನೋಟೀಸ್ ಕೊಡಬೇಕೆಂದು ತೀರ್ಮಾನಿಸಿತ್ತು. ಇದೇ ಪ್ರಕಾರ ಹಾಸನ ಜಿಲ್ಲೆಯಲ್ಲಿರುವ ಕರ್ನಾಟಕ ತೋಟಕಾರ್ಮಿಕರ ಸಂಘವು ಸಹಾ ಶೇ.20 ಬೋನಸ್ಸಿನ ಬೇಡಿಕೆಯನ್ನಿತ್ತು ತೋಟಗಳ ಆಡಳಿತ ಮಂಡಳಿಗಳಿಗೆ ನೋಟೀಸನ್ನು ಕೊಟ್ಟಿತ್ತು.

ಈ ತರುವಾಯ ಕಾಫಿಲ್ಯಾಂಡ್ಸ್ ಕಂಪೆನಿಯ ನಿರ್ದೇಶಕ ಮಂಡಳಿಯ ಸಭೆ ನಡೆದು 1978-79 ಸಾಲಿಗೆ ಶೇ.20 ಬೋನಸ್ಸನ್ನು ಘೋಷಿಸಿದೆ.

ಮುಂದಿನ ಫೆಬ್ರವರಿ 10ನೇ ತಾರೀಖಿನ ಒಳಗಾಗಿ ಕಾರ್ಮಿಕರಿಗೆ ಈ ಬೋನಸ್ ಪಾವತಿಯಾಗುವ ನಿರೀಕ್ಷೆ ಇದೆ. ●

## ಮುಖಸ್ತುತಿ ಮಾಡುವ ಮುಖ್ಯ ಪತ್ರಿಕೆಗಳ ಹೆದರಿಕೆ

(4ನೇ ಪುಟದಿಂದ)

ಶಕ್ತಿಗಳನ್ನು ಒಂದುಗೂಡಿಸಲು ಗಟ್ಟಿಯಾಗಿ ನಿಂತಿರುವುದಲ್ಲದೆ, ದೇಶವನ್ನು ದುಃಸ್ಥಿತಿಗೆತಂದಿರುವ ಬಂಡವಾಳಶಾಹಿ ಪದ್ಧತಿಗೆ ಪ್ರತಿಯಾದ ಪ್ರಜಾಸತ್ತಾತ್ಮಕ ಹಾದಿಯನ್ನು ಜನತೆಯ ಮುಂದಿಟ್ಟಿರುವುದನ್ನು ಈ ಪಂಡಿತರು ಏಕೆ ಕಾಣುವುದಿಲ್ಲ?

ಇತ್ತೀಚಿನ ಚುನಾವಣೆಗಳಲ್ಲಿ ಪ. ಬಂಗಾಳ,ತ್ರಿಪುರಾ ಮತ್ತು ಕೇರಳರಾಜ್ಯಗಳಲ್ಲಿ ಸಿ. ಪಿ. ಐ. (ಎಂ) ನೇತೃತ್ವದ ರಂಗಗಳ ಗಮನಾರ್ಹ ವಿಜಯಗಳು ಪಕ್ಷದ ರಾಜಕೀಯ ನಿಲುಮೆ ಸರಿಯಾಗಿದೆ ಎಂಬುದನ್ನು ತೋರಿಸಿಕೊಟ್ಟಿವೆ. ಆದ್ದರಿಂದ ಪಕ್ಷದ ರಾಜಕೀಯ ನಿಲುಮೆಯ ಬಗ್ಗೆ ತಪ್ಪುಗಳನ್ನು ಹುಡುಕುವುದು, ಎದುರಿಗಿರುವ ಸತ್ಯವನ್ನು ಮರೆಮಾಚಿದಂತೆ ಆಗುತ್ತದೆ ಅಷ್ಟೆ. ○

# ಸಂಘಟನೆಯ ಹಾದಿಯಲ್ಲಿ ರಾಯಚೂರು ಜಿಲ್ಲೆಯ ರೈತರು

ರಾಯಚೂರು ಜಿಲ್ಲೆಯಲ್ಲಿ ದೇಶದ ಅತಿದೊಡ್ಡ ಥರ್ಮಲ್‌ಪ್ಲಾಂಟ್ ಶುರುವಾಗಿದೆ. ಈ ಸ್ಥಾವರಕ್ಕಾಗಿ ಸರಕಾರ ರೈತರ ವಶದಲ್ಲಿದ್ದ ಮೂರು ಸಾವಿರ ಎಕರೆ ಜಮೀನನ್ನು ವಶಪಡಿಸಿಕೊಂಡಿದೆ. ಭೂಮಿಯನ್ನು ಕಳೆದುಕೊಂಡು ಆರು ತಿಂಗಳಾದರೂ ಬೆಳೆ ಪರಿಹಾರವಾಗಲೀ, ಭೂಮಿಯ ಬೆಲೆಯನ್ನಾಗಲೀ ಪಡೆಯದೆ ಉದ್ಲಾಪುರ ಮತ್ತು ದೇವಸುಗೂರು ಊರುಗಳ ರೈತರು ಕಂಗಾಲಾಗಿದ್ದಾರೆ. ಪರಿಹಾರಕ್ಕಾಗಿ ರೈತರು ಮಾಡಿದ ಮನವಿ, ಹೋರಾಟಗಳಿಗೆ ಸರಕಾರ ಕೇವಲ ಆಶ್ವಾಸನೆಗಳ ಉತ್ತರ ನೀಡಿ ದಿನಗಳನ್ನು ದೂಡುತ್ತಿದ್ದಾರೆ. ನಮ್ಮ ದೇಶದ ರಾಷ್ಟ್ರಪತಿಗಳಾದ ಶ್ರೀಮಾನ್ ನೀಲಂ ಸಂಜೀವರೆಡ್ಡಿಯವರು ತಾ. 18-1-1980ರಂದು ಥರ್ಮಲ್ ಸ್ಥಾವರವನ್ನು ಉದ್ಘಾಟಿಸಲು ಬಂದಿದ್ದರು. ಈ ಉದ್ಘಾಟನಾ ಸಮಾರಂಭಕ್ಕೆ ಸುಮಾರು ಐದು ಲಕ್ಷ ರೂಪಾಯಿ ಖರ್ಚಾಗಿದೆ. ರಾಷ್ಟ್ರಪತಿಯವರಿಗೆ ಮನವಿ ಸಲ್ಲಿಸಲು ಅವಕಾಶ ಕೇಳಿದ ಅಸಂಘಟಿತ ರೈತರಿಗೆ ಜಿಲ್ಲಾಧಿಕಾರಿಯವರು ಮನವಿ ಪತ್ರ ಸಲ್ಲಿಸಲು ಅವಕಾಶ ನಿರಾಕರಿಸಿದರು. ಇದರಿಂದ ಕುಪಿತರಾದ ರೈತರು ಸಮಾರಂಭವನ್ನು ಬಹಿಷ್ಕರಿಸಿದರು.

ವಿಷಯ ತಿಳಿದ ಸಿ.ಪಿ.ಐ.(ಎಂ) ರಾಯಚೂರು ಜಿಲ್ಲಾ ಘಟಕವು ರೈತರ ತೊಂದರೆಯನ್ನು ವಿವರಿಸುವ ಸಾವಿರಾರು ಕರಪತ್ರಗಳನ್ನು ಸಮಾರಂಭಕ್ಕೆ ಬಂದ ಜನರಿಗೆ ಹಂಚಿ, ವಿಷಯವನ್ನು ವಿವರಿಸಿದರು. ಕಾಂ. ಚಂದ್ರಶೇಖರ ಬಾಳಿ, ಕಾಂ. ಪುರುಷೋತ್ತಮ ಕಲಾಲಬಂಡಿ, ಕಾಂ. ಶಾಮಸುಂದರ ಮುಂತಾದವರು ಉದ್ಲಾಪುರ ಮತ್ತು ದೇವಸುಗೂರು ಹಳ್ಳಿಗಳಿಗೆ ಹೋಗಿ ರೈತರನ್ನು ಭೇಟಿಮಾಡಿ, ಸಂಘಟನೆಯ ಮಹತ್ವವನ್ನು ತಿಳಿಸಿ, ಹೋರಾಟ ಮಾಡಲು ಕರ್ನಾಟಕ ಪ್ರಾಂತ ರೈತಸಂಘವು ಅವರಿಗೆ ಎಲ್ಲಾ ರೀತಿಯ ಸಹಾಯ ನೀಡುವುದೆಂದು ಭರವಸೆ ನೀಡಿದ್ದಾರೆ.

* * *

ರಾಯಚೂರು ಜಿಲ್ಲೆಯ ಒಂಭತ್ತು ತಾಲ್ಲೂಕುಗಳ ಪೈಕಿ ನಾಲ್ಕು ತಾಲ್ಲೂಕುಗಳಿಗೆ ತುಂಗಭದ್ರಾ ನೀರಾವರಿ ಯೋಜನೆಯಿಂದ ನೀರನ್ನು ಒದಗಿಸಲಾಗಿದೆ. ಸಹಜವಾಗಿ ದೊಡ್ಡ ರೈತರು ಮತ್ತು ಮಧ್ಯಮ ರೈತರು ತಮ್ಮ ಜೀವನಮಟ್ಟವನ್ನು ಸುಧಾರಿಸಿಕೊಂಡಿದ್ದಾರೆ. ಆದರೆ ಸರಕಾರದ ಕಂದಾಯ ನೀತಿಯಿಂದ ಮಧ್ಯಮ ವರ್ಗದ ರೈತರು ಮತ್ತು ಸಣ್ಣ ರೈತರು ತಲ್ಲಣಿಸಿದ್ದಾರೆ. ಈ ತಾಲ್ಲೂಕುಗಳಲ್ಲಿ ರೈತರ ಸಮಸ್ಯೆಗಳನ್ನು ಅರಿಯಲು ರಾಯಚೂರು ಜಿಲ್ಲಾ ರೈತ ಸಂಘದ ಪದಾಧಿಕಾರಿಗಳು ರಾಯಚೂರು, ಗಂಗಾವತಿ, ಸಿಂಧನೂರು ತಾಲ್ಲೂಕುಗಳ ಕೆಲವು ಹಳ್ಳಿಗಳಿಗೆ ಭೇಟಿನೀಡಿ ರೈತರ ಸಭೆಗಳನ್ನು ನಡೆಸಿದರು. ಆದಾಯ ಕರ, ಬೆಟರ್‌ಮೆಂಟ್ ಲೆವಿ, ನೀರುಗಂದಾಯಗಳ ಭಾರವನ್ನು ತಡೆಯಲಾರದೆ ಸಣ್ಣ ರೈತರು ತಮ್ಮ ಭೂಮಿಗಳನ್ನು ಕಳೆದುಕೊಂಡು ಕೂಲಿ ಮಾಡಲು ಹೋಗುವಂತಹ ಪರಿಸ್ಥಿತಿ ಉಂಟಾಗುವುದಕ್ಕೆ ಸರಕಾರದ ಭೂಮಾಲಕ ಬಂಡವಾಳಶಾಹಿ ಪದ್ಧತಿ ಕಾರಣವಾಗಿರುವುದನ್ನು ವಿವರಿಸಿದರು. ಅಗತ್ಯ ವಸ್ತುಗಳನ್ನು ಕೊಳ್ಳುವ ಶಕ್ತಿಯನ್ನು ಕಳೆದುಕೊಳ್ಳುತ್ತಿರುವ ರೈತರ ಸ್ಥಿತಿಯನ್ನು ಸುಧಾರಿಸಲು ರೈತರ ಸಂಘಟನೆಯ ಅವಶ್ಯಕತೆಯನ್ನು ತಿಳಿಯಪಡಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘಕ್ಕೆ ಸದಸ್ಯರನ್ನಾಗಿ ಮಾಡುವ ಕೆಲಸ ಈ ಪ್ರದೇಶಗಳಲ್ಲಿ ಭರದಿಂದ ನಡೆಯುತ್ತಿದೆ.

●

## ಬಿಲ್ಲಟ್ಟ ಎಸ್ಟೇಟ್ ಕಾರ್ಮಿಕರ ಸಭೆ

ಚಿಕ್ಕಮಗಳೂರು ಜಿಲ್ಲೆ, ಮೂಡಿಗೆರೆ ತಾಲ್ಲೂಕಿನಲ್ಲಿರುವ ಬಿಲ್ಲಟ್ಟ ಎಸ್ಟೇಟ್ ಕಾರ್ಮಿಕರ ಸಭೆಯು ತಾ॥ 18-1-80ರಂದು ಕಾಂ. ಎ ಸಿ. ಕೇಶವರ ಅಧ್ಯಕ್ಷತೆಯಲ್ಲಿ ಜರುಗಿತು. ಸಿ ಐ.ಟಿ ಯು. ಕರ್ನಾಟಕ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪನವರು ಸಭೆಯನ್ನುದ್ದೇಶಿಸಿ ಮಾತನಾಡಿದರು. ಕರ್ನಾಟಕ ಪ್ರೊವಿನ್ಷಿಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ ಸಂಘಟಕರಾದ ಕಾಂ. ಕೆ. ರಾಮದಾಸರನ್ನು ಕಾಂ. ಸಿ. ನಂಜುಂಡಪ್ಪನವರು ಸಭಿಕರಿಗೆ ಪರಿಚಯ ಮಾಡಿಕೊಟ್ಟರು.

ಅದೇ ದಿವಸ ಬಿಲ್ಲಟ್ಟ ಎಸ್ಟೇಟ್ ಕಾರ್ಮಿಕರಿಗೆ 1978-79 ಸಾಲಿಗೆ ಶೇ.18ರಂತೆ ಬೋನಸ್ ಪ್ರಾಪ್ತಿಯಾಯಿತು. ಕಳೆದ ವರ್ಷಕ್ಕಿಂತಲೂ ಹೆಚ್ಚು ಬೋನಸ್ ಪಡೆದುಕೊಂಡುದಕ್ಕೆ ಕಾಂ. ಸಿ. ನಂಜುಂಡಪ್ಪನವರು ಬಿಲ್ಲಟ್ಟದ ಕಾರ್ಮಿಕರನ್ನು ಅಭಿನಂದಿಸಿದರು.

○

# ಸಿ. ಪಿ. ಐ. ಮುಂದಾಳು ಕಾಂ. ಬಿ. ವಾಸುಗಟ್ಟಿಯವರು ಸಿ. ಪಿ. ಐ. (ಎಂ)ಗೆ ಯಾಕೆ ಸೇರಿದರು ?

ಎಡ ಪಕ್ಷಗಳ ಐಕ್ಯತೆ ಹಾಗೂ ಎರಡು ಕಮ್ಯುನಿಸ್ಟ್ ಪಕ್ಷಗಳು ಪರಸ್ಪರ ಸಹಕರಿಸಿ ಕೆಲಸ ಮಾಡಬೇಕೆನ್ನುವವರಿಗೆ ಭಾರತ ಕಮ್ಯುನಿಸ್ಟ್ ಪಕ್ಷದಲ್ಲಿ ಸ್ಥಾನವಿಲ್ಲವೆನ್ನುವುದನ್ನು ಭಾರತ ಕಮ್ಯುನಿಸ್ಟ್ ಪಕ್ಷದ ಬಂಟ್ವಾಳ ತಾಲ್ಲೂಕು ಸಮಿತಿಯ ಸದಸ್ಯನಾದ ನಾನು ಕೆಲ ವರ್ಷಗಳ ಅನುಭವದಲ್ಲಿ ಅರಿತಿರುವೆನು.

ಮೊನ್ನೆ ನಡೆದ ಲೋಕಸಭಾ ಚುನಾವಣೆಯಲ್ಲಿ ನನ್ನ ಪಕ್ಷದ ಅಖಿಲ ಭಾರತ ನಿಲುವಿನ ಆಧಾರದಲ್ಲಿ ನಾನು ಮಂಗಳೂರು ಕ್ಷೇತ್ರದಲ್ಲಿ ಸಿ ಪಿ.ಐ.(ಎಂ) ಗೆ ಬೆಂಬಲ ನೀಡಿದ್ದಕ್ಕೆ ನನ್ನನ್ನು ಸಿ. ಪಿ. ಐ ಯಿಂದ ತೆಗೆದುಹಾಕಲಾಗಿದೆ ಎಂದು ತಿಳಿದಿರುವೆನು.

ನಾನು ಸಿ.ಪಿ.ಐ(ಎಂ)ಗೆ ಬೆಂಬಲ ನೀಡಲು ನಿರ್ಧರಿಸಿದ್ದು 25-12-79 ರಂದು. 26-12-79ರಂದು ಸಿ ಪಿ.ಐ.ಯ ತಾಲ್ಲೂಕು ಸಮಿತಿ ಸೇರಿ ನನ್ನನ್ನು ಪಕ್ಷದಿಂದ ತೆಗೆದು ಹಾಕಲು ನಿರ್ಣಯಿಸಿತು ಎಂದು ನನಗೆ ತಲುಪಿರುವ ರಿಜಿಸ್ಟರ್ ಪತ್ರದಿಂದ ತಿಳಿದು ಬರುತ್ತಿದೆ. ಪಾರ್ಟಿ ವಿರೋಧಿ ಚಟುವಟಿಕೆ, ಗುಂಪುಗಾರಿಕೆ, ಬಹಿರಂಗವಾಗಿ ಪಾರ್ಟಿಯ ನಿಂದನೆ, ಈ ಮೂರು ಆರೋಪಗಳನ್ನು ನನ್ನ ಮೇಲೆ ಹೊರಿಸಲಾಗಿದೆ. ಒಂದೇ ಒಂದು ಆರೋಪವೂ ನಾನು ಸದಸ್ಯನಾಗಿದ್ದ ಸಮಿತಿಯಲ್ಲಿ ಈ ಮೊದಲು ಚರ್ಚಿಸಿದ್ದು ಇಲ್ಲ. ಎಡಪಕ್ಷಗಳ ಐಕ್ಯತೆ ಹಾಗೂ ಇಂದಿನ ಪರಿಸ್ಥಿತಿಯಲ್ಲಿ ಎರಡು ಕಮ್ಯುನಿಸ್ಟ್ ಪಕ್ಷಗಳು ಜನಕೀಯ ಚಳುವಳಿಗಳಲ್ಲಿ ಹಾಗೂ ಚುನಾವಣಾ ಹೋರಾಟಗಳಲ್ಲಿ ಪರಸ್ಪರ ಸಹಕರಿಸುವುದರಲ್ಲಿ ಹಿಂದೆ ಬೀಳುವ ನಮ್ಮ ಮುಂದಾಳುಗಳನ್ನು ಎಚ್ಚರಿಸಿದ್ದು ನಿಜ. ರಾಜ್ಯದ ಮುಂದಾಳು ದ. ಕ ಜಿಲ್ಲಾ ಸಮಿತಿಯ ಕಾರ್ಯದರ್ಶಿಯವರು ಹಾಗೂ ಇತರ ಕೆಲ ಮುಖಂಡರೂ ನಿರ್ಲಕ್ಷಿಸಿ ರಾಜ್ಯಮಟ್ಟದಿಂದ ಗ್ರಾಮದವರೆಗೆ ಕಾಂಗ್ರೆಸ್ಸಿನೊಂದಿಗೆ ನಮ್ಮ ಪಾರ್ಟಿಯ ಐಕ್ಯತೆಯನ್ನು ಕಳೆದ ಎರಡು ವರ್ಷಗಳಿಂದ ಪಾರ್ಟಿ ಸದಸ್ಯರ ವಿರೋಧವಿದ್ದರೂ ಸಹ ಮುಂದಾಳುಗಳು ನಡೆಸಿದರು. ಮುಂದಾಳುಗಳ ಈ ಪ್ರವೃತ್ತಿಯನ್ನು ನಾನು ವಿರೋಧಿಸುತ್ತಾ ಬಂದಿದ್ದೇನೆ.

ಇದೇ ಪಾರ್ಟಿ ವಿರೋಧಿ, ಗುಂಪುಗಾರಿಕೆ, ಬಹಿರಂಗ ನಿಂದೆ ಎಂದು ಮುಂದಾಳುಗಳು ತಿಳಿಯುವುದಿದ್ದರೆ ಅವರು ಇತಿಹಾಸದಿಂದ ಪಾಠ ಕಲಿತಿಲ್ಲಾ ಎಂದು ಮಾತ್ರ ಹೇಳಬಲ್ಲೆ.

ನನ್ನನ್ನು ಹೊರಹಾಕಿದ ಸಿ ಪಿ ಐ. ಮುಂದಾಳುಗಳಿಗೆ ತಮ್ಮದೇ ಪಾರ್ಟಿಯ ಘಟನೆಯಲ್ಲಿ ಹೇಳುವ ಅದನ್ನು ತಿಳಿದು ನನ್ನ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳುವ ಸೌಜನ್ಯತೆ ಇಲ್ಲದಕ್ಕೆ ಅನುತಾಪ ವ್ಯಕ್ತಪಡಿಸಬೇಕಾಗಿದೆ.

ತಾಲ್ಲೂಕು ಸಮಿತಿ ಸದಸ್ಯನಾದ ನಾನು ಸಿ.ಪಿ ಐ. ಮುಂದಾಳು ಹೊರಿಸುತ್ತಿರುವ ಆರೋಪಗಳು ನಾನು ಇದ್ದ ಸಮಿತಿಯಲ್ಲಿ ಚರ್ಚಿಸಿ ತೀರ್ಮಾನಿಸುವ ಶಿಸ್ತಿನ ಕ್ರಮವನ್ನು ಮೇಲಿನ ಸಮಿತಿಗೆ ಶಿಫಾರಸ್ಸು ಮಾಡಬೇಕಿತ್ತು. ತಾಲ್ಲೂಕು ಸಮಿತಿಯ ಘಟನಾ ಬಾಹಿರ ನಿರ್ಧಾರದ ಬಗ್ಗೆ ನಾನು ಮೇಲಿನ ಸಮಿತಿಗೆ ಬರೆದರೂ ಬಂಡೆಯ ಮೇಲೆ ನೀರೆರೆದಂತಾಯಿತು.

ನನ್ನ ಹಾಗೆಯೇ ಅಭಿಪ್ರಾಯಗಳನ್ನು ಪಾರ್ಟಿಯ ಒಳಗಿದ್ದು ಕಾದಿಸುತ್ತಾ ಬಂದ ಹಿರಿಯ ಕಾಮ್ರೇಡರಾದ ಬಿ. ಎಚ್. ಬಂಗೇರ, ಮಂಜುನಾಥ ಸಫಲ್ಯ, ರುಕ್ಕಯ್ಯ ಪೂಜಾರಿ, ತನಿಯಪ್ಪ ಬಂಗೇರ, ಗೋಪಾಲ ಗೌಡರನ್ನೆಲ್ಲಾ ಕಳೆದ ಒಂದು ವರ್ಷದಿಂದ ಸಿ. ಪಿ ಐ. ಯಿಂದ ಹೊರಹಾಕಿ ಅವರೆಲ್ಲಾ ಇಂದು ಸಿ ಪಿ ಐ(ಎಂ)ಗೆ ಸೇರಿ, ಬಂಟ್ವಾಳ ತಾಲ್ಲೂಕಿನಲ್ಲಿ ಬಲಿಷ್ಠ ಸಂಘಟನೆ ಕಟ್ಟಿದ್ದಾರೆ.

ಬಾಯಲ್ಲಿ ಬಹಳಷ್ಟು ಎಡಪಕ್ಷಗಳ ಐಕ್ಯತೆಯನ್ನು ಮಾತಾಡಿ ಕಾರ್ಯದಲ್ಲಿ ಐಕ್ಯತೆಯನ್ನು ಮುರಿಯುವ ಸಿ.ಪಿ.ಐ ಮುಂದಾಳುಗಳ ದ್ವಿಮುಖ ನೀತಿ ಈ ಸಮಯದಲ್ಲಿ ಅಪಾಯಕಾರಿ. ಸರ್ವಾಧಿಕಾರಿ ಶಕ್ತಿಗಳಿಗಷ್ಟೆ ನೆರವಾದೀತು.

ನಮ್ಮ ದೇಶದ ಶೋಷಿತ ಮರ್ದಿತ ದುಡಿಯುವ ಸಮುದಾಯ ಅಪೇಕ್ಷಿಪಡುವ ಎಡಪಕ್ಷಗಳ ಐಕ್ಯತೆ, ಸಮಾಜವಾದಿ ಚಳುವಳಿಗೆ, ಸಿ.ಪಿ.ಐ. ಮುಂದಾಳುಗಳು ಅನುಸರಿಸುವ ನೀತಿಯಿಂದ ಸಹಾಯವಾಗದೆಂದು ನಾನು ತಿಳಿದುಕೊಂಡಿರುವೆನು. ಪಾರ್ಟಿಯ ಅಧಿವೇಶನದಲ್ಲಿ ಅಂಗೀಕರಿಸಿದ ತೀರ್ಮಾನಗಳನ್ನು ಗಾಳಿಗೆ ಬಿಟ್ಟು ಸಂದರ್ಭ ಸಾಧಕತೆಗೆ ಹೊರಟ ಸಿ. ಪಿ. ಐ. ಮುಂದಾಳುಗಳಿಂದ ದುಡಿಯುವ ಜನಕ್ಕೆ ಕ್ಷೇಮವಿಲ್ಲ.

ಆದುದರಿಂದ 19 ವರ್ಷಗಳಿಂದ ಓರ್ವ ಕಮ್ಯುನಿಸ್ಟನಾಗಿ ದುಡಿಯುವ ವರ್ಗದ ಸಂಘಟನೆ ಮಾಡಿ ಹಲವು ಚಳವಳಿಗಳಲ್ಲಿ ಭಾಗವಹಿಸಿದ ನಾನು ಇನ್ನು ಮುಂದೆ ಭಾರತ ಕಮ್ಯುನಿಸ್ಟ್ (ಮಾರ್ಕ್ಸ್‌ವಾದಿ) ಪಕ್ಷಕ್ಕೆ ಸೇರಿ, ನಾನು ನಂಬಿರುವ ಸಮಾಜ ಪರಿವರ್ತನಾ ಉದ್ದೇಶವನ್ನು ಸಾಧಿಸುತ್ತೇನೆ ಎಂದು ಈ ಹೇಳಿಕೆಯಲ್ಲಿ ದೃಢಪಡಿಸುತ್ತೇನೆ.

ಇನ್ನು ಸ್ವಲ್ಪ ಸಮಯದಲ್ಲೇ ಸಿ.ಪಿ. ಐ.ಯ ಕೆಲ ಮುಂದಾಳುಗಳೂ ಬಿಟ್ಟು ಹೆಚ್ಚಿನ ಎಲ್ಲಾ ಸದಸ್ಯರೂ ಹಾಗೂ ಹಿತಚಿಂತಕರೂ ಇದೇ ಹಾದಿಯಲ್ಲಿ ಬರುವರೆಂದು ನಂಬಿದ್ದೇನೆ. ಹಾಗೂ ಅದಕ್ಕಾಗಿ ಶ್ರಮಿಸುತ್ತೇನೆ. ಬಂಟ್ವಾಳ ತಾಲ್ಲೂಕಿನ ರೈತರೂ, ಮಜೂರರೂ, ಇತರ ಪ್ರಜಾಪ್ರಭುತ್ವವಾದಿ ಜನತೆ ನನ್ನೊಂದಿಗೆ ಸಹಕರಿಸಬೇಕೆಂದೂ ವಿನಯಪೂರ್ವಕವಾಗಿ ಪ್ರಾರ್ಥಿಸುತ್ತೇನೆ.

ಸಹಿ (ಬಿ. ವಾಸುಗಟ್ಟಿ)
ಬಿ. ವಾಸುಗಟ್ಟಿ ಸದಸ್ಯನಾಗಿದ್ದ
ಭಾರತ ಕಮ್ಯುನಿಸ್ಟ್ ಪಾರ್ಟಿಯ
ಬಂಟ್ವಾಳ ತಾಲ್ಲೂಕು ಸಮಿತಿ.

●

## ವಾಚಕರ ಪತ್ರ

ಸಂಪಾದಕರ ಸನ್ನಿಧಾನಕ್ಕೆ,

ಮಾನ್ಯರೆ,

ತುಮಕೂರು ಜಿಲ್ಲಾ ಪಾವಗಡ ತಾಲ್ಲೂಕಿನ ವಿರುಪಸಮುದ್ರ, ಕನಕಾಪುರ ಮಜರೆ ಗಂಗವರ, ಮಾಚರಾಜನಹಳ್ಳಿ ಹಾಗು ಇತರೆ ಹಳ್ಳಿಗಳು ಕರ್ನಾಟಕದ ಗಡಿಯಲ್ಲಿದ್ದು, ಶ್ರಮಿಕವರ್ಗ ಸಣ್ಣ ರೈತವರ್ಗದ ಜೀವನ ಕತ್ತರಿಯಲ್ಲಿ ಸಿಕ್ಕ ಅಡಕೆಯಂತಾಗಿದೆ.

ಅರ್ಜಿ ಸಲ್ಲಿಸಿ 20 ವರ್ಷಗಳಾದರೂ ಭೂಮಿ ಕಾಣದ ಬಡಜನತೆ, ಕಾಳಸಂತೆಯಲ್ಲಿ ಮೆಟ್ರಿಕ್ ಪದ್ಧತಿಯ ತೂಕ ಅಳತೆಗಳಿಲ್ಲದೆ, ಸೀಮೆಣ್ಣೆ ಮತ್ತು ನಿತ್ಯ ಬಳಕೆ ವಸ್ತುಗಳನ್ನ ಎರಡರಷ್ಟು ಬೆಲೆ ಕೊಟ್ಟು ಕೊಳ್ಳುತ್ತಿರುವ ಸ್ಥಿತಿ, ಕೂಲಿಗಾರರು, ಸಣ್ಣ ರೈತರು ಕೆಲವೇ ರಾಜಕೀಯ ಪ್ರಮುಖರ ಕೈವಾಡದಿಂದಾಗಿ, ಕಾಸಿದ್ರೆ ಕೈಲಾಸವೆಂಬಂತೆ ಪ್ರತಿಫಲ ತೋರುವ ಸರಕಾರಿ ಅಧಿಕಾರಿಗಳ ಸೇವೆ, ಈ ಸಂಕಟದಲ್ಲಿದ್ದಾರೆ. ಈ ಬಗ್ಗೆ ವಿಚಾರವಂತ ಜನರು ಮತ್ತು ಅಧಿಕಾರಿಗಳು ಗಮನಹರಿಸಬೇಕು. ಹಾಗೂ ಮೇಲ್ಕಂಡ ಅಂಶಗಳನ್ನು ಪಂಚಾಯಿತಿ ಅಧ್ಯಕ್ಷರ ಮೂಲಕನಿವೇದಿಸಿಕೊಂಡರೂ ಪ್ರಯೋಜನವಾಗಿಲ್ಲ. ಪಂಚಾಯಿತಿ ಸದಸ್ಯರು ಅಧ್ಯಕ್ಷರು ಮೇಲ್ಕಂಡ ಅಂಶಗಳ ಬಗ್ಗೆ ಗಮನಹರಿಸಿ ಇತ್ಯರ್ಥ ಮಾಡಲಿ ಇಲ್ಲವೇ ರಾಜೀನಾಮೆ ನೀಡಲಿ ಎಂದು ಕೋರುತ್ತೇನೆ.

ಇತಿ
ನಾಗರತ್ನಪ್ಪ
ಗೌಂಡೇಟಿ
ಪಾವಗಡ ತಾ॥

○

## ಆರ್ಥಿಕ ಸಮೀಕ್ಷೆ

[3ನೇ ಪುಟದಿಂದ]

2/3ರಷ್ಟು ಬಹುಮತ ಪಡೆದು ಅಧಿಕಾರಕ್ಕೆ ಬರುವುದನ್ನು ತಿಳಿದ ಕೈಗಾರಿಕಾ ಹಾಗೂ ವ್ಯಾಪಾರೀ ವಲಯಗಳು ದೇಶಾದ್ಯಂತ ವಿಜಯೋತ್ಸವಗಳನ್ನು ಆಚರಿಸುತ್ತಿವೆ. ಮುಂಬಯಿ, ಕಲ್ಕತ್ತಾ, ಮದರಾಸು, ಮುಂತಾದ ಕಡೆಗಳಲ್ಲಿ ಷೇರು ಮಾರುಕಟ್ಟೆಗಳಲ್ಲಿ ಗುತ್ತೇದಾರಿ ಹಾಗೂ ವಿದೇಶಿ ಕೈಗಾರಿಕಾ ಸಂಸ್ಥೆಗಳ ಷೇರುಗಳ ಧಾರಣೆಗಳಲ್ಲಿ ಭಾರೀ ಹೆಚ್ಚಳ ಉಂಟಾಗಿದೆ. ಯಾಕೆ? ಇಂದಿರಾಗಾಂಧಿ ಅಧಿಕಾರಕ್ಕೆ ಬಂದರೆ, ಸ್ಥಿರ ಸರಕಾರವಿರುವುದು, ಕಾರ್ಮಿಕ ಅಶಾಂತಿಯನ್ನು ಹತ್ತಿಕ್ಕುವುದು, ಶಿಸ್ತುಪಾಲನೆ ನಡೆಸುವುದು, ಕೈಗಾರಿಕಾ ಸಂಸ್ಥೆಗಳ, ವ್ಯಾಪಾರಸ್ಥರ, ಭೂಮಾಲಿಕರ ಲಾಭಾದಾಯಗಳು ಹೆಚ್ಚುವುವು ಎಂದು!

ತನ್ನ ಸರಕಾರ ಎಲ್ಲಾ ವಿಷಯಗಳಲ್ಲಿ ಬದಲಾವಣೆ ತರುವುದೆಂದು ಇಂದಿರಾಗಾಂಧಿ ಹೇಳಿಕೊಳ್ಳುತ್ತಿದ್ದಾರೆ. ಹಾಗಾದರೆ, "ಆರ್ಥಿಕ ಹಿಂಜರಿತ" ಮತ್ತು "ಹಣದುಬ್ಬರ" ಈ ಎರಡು ಗಂಭೀರ ಸಮಸ್ಯೆಗಳನ್ನು ಇಂದಿರಾ ಸರಕಾರ ಹೇಗೆ ನಿವಾರಿಸಬಲ್ಲದು ?

'ಆರ್ಥಿಕ ಹಿಂಜರಿತ'ವನ್ನು ತಡೆಯಲು ಇಂದಿರಾ ಸರಕಾರವು ಗ್ರಾಮೀಣ ಬಡರೈತರ ಹಾಗೂ ಕೃಷಿ ಕಾರ್ಮಿಕರ ಆದಾಯ ಹೆಚ್ಚಿಸುವುದೆ? ಕೈಗಾರಿಕಾ ಕಾರ್ಮಿಕರ, ನೌಕರರ ವೇತನ ಹೆಚ್ಚಿಸಿ ಅವರ ಗ್ರಾಹಕ ಶಕ್ತಿಯನ್ನು ಹೆಚ್ಚಿಸುವುದೆ? 'ಹಣದುಬ್ಬರ'ವನ್ನು ನಿಯಂತ್ರಿಸಲು ಇಂದಿರಾ ಸರಕಾರವು ಖೋತಾ ಬಡ್ಜೆಟ್, ಕೃತಕ ಹಣ ಸೃಷ್ಟಿ, ಜೀವನಾವಶ್ಯಕ ವಸ್ತುಗಳ ಮೇಲಿನ ಅಪ್ರತ್ಯಕ್ಷ ತೆರಿಗೆ, ಇತ್ಯಾದಿ ಕ್ರಮಗಳನ್ನು ಬಿಟ್ಟು ಕೊಡುವುದೆ? ಗುತ್ತೇದಾರಿ ಬಂಡವಾಳಗಾರರ, ದೊಡ್ಡ ಭೂಮಾಲಕರ, ಶ್ರೀಮಂತ ವ್ಯಾಪಾರಿಗಳ ಲಾಭಾದಾಯಗಳನ್ನು ನಿಯಂತ್ರಿಸುವುದೇ? ಕಪ್ಪು ಹಣವನ್ನು ರೂಪಾಯಿಯ ಅಪಮೌಲ್ಯಕರಣದಿಂದ ಚಲಾವಣೆಯಿಂದ ತೆಗೆದುಹಾಕುವುದೆ? ಜೀವನಾವಶ್ಯಕ ವಸ್ತುಗಳನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಒದಗಿಸಿಕೊಡಲು ಸಗಟು ವ್ಯಾಪಾರವನ್ನಾದರೂ ರಾಷ್ಟ್ರೀಕರಿಸುವುದೆ? ವಿದೇಶಿ ಬಂಡವಾಳಗಾರರು, ಬಹುರಾಷ್ಟ್ರೀಯ ಸಂಸ್ಥೆಗಳು ನಮ್ಮ ದೇಶದ ಆಂತರಿಕ ಮಾರುಕಟ್ಟೆಯನ್ನು ಕಬಳಿಸುವುದನ್ನು ತಡೆಯುವುದೆ? ಇಲ್ಲ!

**ದುಃಸ್ಥಿತಿಯ ಭಾರ ಶ್ರಮಿಕ ವರ್ಗದ ಮೇಲೆ:**

1974-75 ರಲ್ಲಿಯೂ ಹಿಂದಿನ ಎರಡು ವರ್ಷಗಳಲ್ಲಿನ ಬರಗಾಲ ಹಾಗೂ ಆಹಾರ ಉತ್ಪಾದನೆಗಳ ಕುಸಿತದಿಂದಾಗಿ ಸಂಭವಿಸಿದ ಹಣದುಬ್ಬರವನ್ನು ಹೋಗಲಾಡಿಸಲು ಇಂದಿರಾ ಸರಕಾರ ಕೈಗೊಂಡ ಕೆಲವು ಕ್ರಮಗಳು ಆರ್ಥಿಕ ದುಃಸ್ಥಿತಿಯ ಭಾರವನ್ನು ಸಂಘಟಿತ ಕಾರ್ಮಿಕರ ಹೆಗಲಿಗೇ ಹೇರುವ ಉದ್ದೇಶ ಹೊಂದಿದ್ದವು. 1974ರಲ್ಲಿ 18 ಲಕ್ಷ ರೈಲ್ವೆ ಕಾರ್ಮಿಕರ ಮುಷ್ಕರವನ್ನು ಸರಕಾರವು ಬಲಪ್ರಯೋಗದಿಂದ ಹತ್ತಿಕ್ಕಿತು. ವೇತನ ಪರಿಷ್ಕರಣ, ಬೋನಸ್, ಮುಂತಾದ ಅವರ ಬೇಡಿಕೆಗಳನ್ನು ತಿರಸ್ಕರಿಸಿತು. ಮುಂದೆ ಸೆಪ್ಟೆಂಬರ್ '74ರಲ್ಲಿ 180 ಲಕ್ಷ ಸಂಘಟಿತ ಕಾರ್ಮಿಕರ ಹಾಗೂ ನೌಕರರ ವೇತನ, ತುಟ್ಟಿಭತ್ತೆಗಳನ್ನು ಸ್ಥಗಿತಗೊಳಿಸಲಾಯಿತು; ಅವುಗಳ ಅನಿವಾರ್ಯದ ಹೆಚ್ಚಳವನ್ನು ಕಡ್ಡಾಯ ಠೇವಣಿಯಲ್ಲಿಡಲು ಶಾಸನ ಮಾಡಲಾಯಿತು. ಸ್ವಲ್ಪ ಕಾಲ ಕೈಗಾರಿಕಾ ಸಂಸ್ಥೆಗಳು ಡಿವಿಡೆಂಟ್ (ಲಾಭ) ಹಂಚುವುದರ ಮೇಲೆ ನಿಯಂತ್ರಣ ವಿಧಿಸಿದರೂ ಮುಂದೆ ತುರ್ತುಪರಿಸ್ಥಿತಿಯಲ್ಲಿ ಈ ಕ್ರಮವನ್ನು ಬಿಟ್ಟು ಬಿಡಲಾಯಿತು. ಬದಲು, ಕಾರ್ಮಿಕರ ಮತ್ತು ನೌಕರರ ಬೋನಸ್ ಕಡಿತಗೊಳಿಸಲಾಯಿತು. ಹಣದುಬ್ಬರವನ್ನು ತಡೆಯಲು ಸಾಲ ನಿಯಂತ್ರಣ ಕ್ರಮದಿಂದಾಗಿ ಅನೇಕ ಕೈಗಾರಿಕಾ ಸಂಸ್ಥೆಗಳು ದಿವಾಳಿಯಾದವು. ಆರ್ಥಿಕ ಹಿಂಜರಿತ ಪ್ರಾರಂಭವಾಯಿತು. ಕಾರ್ಮಿಕರು, ನೌಕರರು ಹಣದುಬ್ಬರ ಹಾಗೂ ಆರ್ಥಿಕ ಹಿಂಜರಿತದ ಅನಾಹುತಗಳ ವಿರುದ್ಧ ಸಂಘಟಿತ ಹೋರಾಟ ಹೂಡುವುದನ್ನು ತಡೆಯಲು ತುರ್ತುಪರಿಸ್ಥಿತಿಯನ್ನು ಜಾರಿಮಾಡಿ ಅವರ ಸಂಘಟನಾಸ್ವಾತಂತ್ರ್ಯ, ಮುಷ್ಕರ ಸ್ವಾತಂತ್ರ್ಯಗಳನ್ನು ಕಸಿದುಕೊಳ್ಳಲಾಯಿತು. ಸಾವಿರಾರು ಕಾರ್ಮಿಕ ನಾಯಕರನ್ನೂ ಲಕ್ಷಾಂತರ ಕಾರ್ಮಿಕರನ್ನೂ ಸೆರೆಮನೆಗೆ ಸೇರಿಸಲಾಯಿತು. ಲಾಕ್‌ಔಟ್, ಲೇಆಫ್, ಕೆಲಸದಿಂದ ತೆಗೆದುಹಾಕುವುದು ಹೆಚ್ಚಾಯಿತು. ಶ್ರಮಿಕವರ್ಗಕ್ಕೆ ಬಂಡವಾಳಶಾಹಿ ಆರ್ಥಿಕ ಪದ್ಧತಿಯ ದುಃಸ್ಥಿತಿಯಿಂದ ರಕ್ಷಣೆ ಪಡೆಯಲು ಅಸಾಧ್ಯವಾಯಿತು.

1980ರಲ್ಲಿನ ಹಣದುಬ್ಬರ, ಆರ್ಥಿಕ ಹಿಂಜರಿತ ಈ ಎರಡು ಸಮಸ್ಯೆಗಳನ್ನು ಇಂದಿರಾ ಸ್ಥಿರ ಸರಕಾರ ಹೇಗೆ ಬಗೆಹರಿಸುವುದು? ಸಧ್ಯ ಇಂದಿರಾ ಕಾಂಗ್ರೆಸ್‌ನ ರಾಜಕೀಯ ವಿರೋಧಿಗಳು, ಎಡಪಕ್ಷಗಳನ್ನುಳಿದು, ನುಚ್ಚುನೂರಾಗಿರುವುದರಿಂದ ಕೂಡಲೇ ತುರ್ತುಪರಿಸ್ಥಿತಿಯನ್ನು ಜಾರಿಗೆ ತರದಿದ್ದರೂ, ಸಂಘಟಿತ ಕಾರ್ಮಿಕರಿಗೆ, ನೌಕರರಿಗೆ ಆಪತ್ತು ತಪ್ಪಿದ್ದಲ್ಲವೆಂದು ನೆನಪಿಡಬೇಕು. ತುರ್ತುಪರಿಸ್ಥಿತಿ ಇಲ್ಲದೆಯೇ ಅವರ ಸಂಘಟನೆಯನ್ನು ಮುರಿಯಲು, ಬೇಡಿಕೆಗಳನ್ನು ತಿರಸ್ಕರಿಸಲು ಎಲ್ಲಾ ಕಠಿಣ ಕ್ರಮಕೈಗೊಳ್ಳುವುದರಲ್ಲಿ ಸಂಶಯವಿಲ್ಲ. ಸರಕಾರಿ ಅರ್ಥಶಾಸ್ತ್ರಜ್ಞರು ಈಗಾಗಲೇ ಆರ್ಥಿಕ ತುರ್ತುಪರಿಸ್ಥಿತಿಯನ್ನು ಘೋಷಿಸಲು ಸಲಹೆಮಾಡಿರುತ್ತಾರೆ. ಆದುದರಿಂದಲೇ, ಮುಂದಿನ ದಿನಗಳಲ್ಲಿ ದೇಶಾದ್ಯಂತ ತೀವ್ರ ವರ್ಗ ಸಂಘರ್ಷ ಸಂಭವಿಸಲಿದೆ ಎಂದು ಕಾಂ. ಇ. ಎಂ. ಎಸ್. ಚುನಾವಣೆಯ ನಂತರ ಎಚ್ಚರಿಕೆ ನೀಡಿರುವುದು.

●

## ಇಂದಿರಾ ಸ್ವಾಗತಕ್ಕೆ ತಿರುವನಂತಪುರದ ಮೇಯರ್ ಗೈರುಹಾಜಿರು

ಚುನಾವಣಾ ಪ್ರಚಾರಕ್ಕಾಗಿ ತಾ. 17ರಂದು ಕೇರಳದ ರಾಜಧಾನಿ ತಿರುವನಂತಪುರಕ್ಕೆ ಬಂದಿರುವ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರನ್ನು ಸ್ವಾಗತಿಸಲು ತಾನು ಹೋಗಲಾರೆ ಎಂಬುದಾಗಿ ತಿರುವನಂತಪುರದ ನಗರದ ಮೇಯರ್ ಎಂ.ಪಿ. ಪದ್ಮನಾಭನ್ ತಿಳಿಸಿದ್ದರು.

ಪತ್ರಕರ್ತರಿಗುತ್ತರಿಸುತ್ತಾ ಮಾತನಾಡುತ್ತಿದ್ದ ಅವರು ಇದು ಪ್ರಧಾನಿಯವರ ಅಧಿಕೃತ ಸಂದರ್ಶನವಲ್ಲ, ಚುನಾವಣಾ ಪ್ರಚಾರದ ರಾಜಕೀಯ ಸಂದರ್ಶನವಾಗಿದ್ದು, ಅದಕ್ಕೆ ಮೇಯರ್ ಆಗಿರುವ ನಾನು ಹೋಗುವ ಅವಶ್ಯಕತೆಯಿಲ್ಲ.

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಕಾಂ. ಜ್ಯೋತಿಬಸು ಹಾಗೂ ತ್ರಿಪುರಾ ಮುಖ್ಯ ಮಂತ್ರಿ ಕಾಂ. ನೃಪೇನ್ ಚಕ್ರವರ್ತಿಯವರು ಕೇರಳವನ್ನು ಸಂದರ್ಶಿಸಿದ್ದು ಚುನಾವಣಾ ಪ್ರಚಾರಕ್ಕಾಗಿಯೇ, ಆದರೆ ಅವರು ಸರಕಾರಿ ವಾಹನವನ್ನು ಉಪಯೋಗಿಸದೇ, ತಮ್ಮ ಪಕ್ಷವು ಏರ್ಪಡಿಸಿದ ವಾಹನವನ್ನು ಉಪಯೋಗಿಸಿದ್ದಾರೆ ಎಂದು ಅವರು ಹೇಳಿದರು.

ಎಡ ಪ್ರಜಾಪ್ರಭುತ್ವ ರಂಗಕ್ಕಾಗಿ ದುಡಿಯುವ ನಾನು ಕೇವಲ ಚುನಾವಣಾ ಪ್ರಚಾರಕ್ಕಾಗಿ ಬರುವ ಪ್ರಧಾನಿಯವರನ್ನು ಹೇಗೆ ಸ್ವಾಗತಿಸಲು ಹೋಗಲಿ ಎಂದು ಪ್ರಶ್ನಿಸಿದರು. ಪ್ರಧಾನಿಯವರು ಅಧಿಕೃತವಾಗಿ ಭೇಟಿಯಿತ್ತಾಗ ತಪ್ಪದೆ ತಾನು ಸ್ವಾಗತಿಸುವುದಾಗಿ ಅವರು ಹೇಳಿದರು.

○

### ಚಂದಾ ವಿವರ

| | |
|---|---|
| ಬಿಡಿಪ್ರತಿ | 40 ಪೈಸೆ |
| 6 ತಿಂಗಳಿಗೆ | 10 ರೂ. |
| ಒಂದು ವರ್ಷಕ್ಕೆ | 20 ರೂ. |

## ತ್ರಿಪುರಾದಲ್ಲಿ ಪಕ್ಷದ ಪ್ರಭಾವ ಹೆಚ್ಚಿದೆ

ತ್ರಿಪುರಾ ರಾಜ್ಯದ ಎರಡೂ ಲೋಕಸಭಾ ಸ್ಥಾನಗಳನ್ನು ಗೆದ್ದುಕೊಂಡ ಭಾರತೀಯ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ವು ಕಳೆದ ಚುನಾವಣೆಗಿಂತ ಹದಿಮೂರು ಶೇಕಡಾ ಅಧಿಕ ಮತಗಳನ್ನು ಗಳಿಸಿದೆ. ಒಟ್ಟು ಚಲಾಯಿಸಲ್ಪಟ್ಟ ಮತಗಳ ಪೈಕಿ 47% ಮತಗಳು ಪಕ್ಷದ ಅಭ್ಯರ್ಥಿಗಳಿಗೆ ದೊರತಿದೆ.

ಪಶ್ಚಿಮ ತ್ರಿಪುರಾ ಸ್ಥಾನದಲ್ಲಿ ಪಕ್ಷದ ಅಭ್ಯರ್ಥಿ ಕಾಂಗ್ರೈ ಅಭ್ಯರ್ಥಿಯನ್ನು 53,345 ಮತಗಳಿಂದ ಸೋಲಿಸಿ ಆಯ್ಕೆಯಾಗಿರುತ್ತಾರೆ. ಪೂರ್ವತ್ರಿಪುರಾದ ಪಕ್ಷದ ಅಭ್ಯರ್ಥಿಯಿಂದ ಸೋಲಿಸಲ್ಪಟ್ಟ ಕಾಂಗ್ರೈ ಇಡುಗಂಟು (ಠೇವಣಿ) ಕೂಡ ಕಳೆದುಕೊಂಡಿದೆ.

ಜನತಾ ಮತ್ತು ಕಾಂಗ್ರೆಸ್ (ಯು) ಅಭ್ಯರ್ಥಿಗಳು ಎರಡೂ ಕ್ಷೇತ್ರಗಳಲ್ಲೂ ಠೇವಣಿ ಕಳೆದುಕೊಂಡಿರುತ್ತಾರೆ. ಅಮ್ರಾ ಬಂಗಾಳಿ ಮತ್ತು ತ್ರಿಪುರಾ ಉಪಜಾತಿ ಸಮಿತಿಗಳಿಗೆ ಅನುಕ್ರಮವಾಗಿ 15% ಮತಗಳು ಮಾತ್ರ ಲಭಿಸಿವೆ. ●

## ನಿಧನ

ಕುಂದಾಪುರದಲ್ಲಿ ತಾರೀಕು 29-12-1979ರಂದು, ಈ ಹಿಂದೆ ಗುಲ್ವಾಡಿ ಹಂಚಿನ ಕಾರ್ಖಾನೆಯಲ್ಲಿ ಕೆಲಸಮಾಡುತ್ತಿದ್ದ ಕಾರ್ಮಿಕ, ಜಿ. ಹಂಸ ಎಂಬವರು ಜೀಪ್ ಅಪಘಾತದಲ್ಲಿ ತೀವ್ರ ಜಖಂಗೊಂಡು ಮಣಿಪಾಲ ಆಸ್ಪತ್ರೆಯಲ್ಲಿ ಸೇರಿಸಲಾಗಿದ್ದು, ತಾರೀಕು 13-1-1980ರಂದು ನಿಧನ ಹೊಂದಿದರು.

ಮೃತರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹಿತೈಷಿಯಾಗಿದ್ದು, ಪಕ್ಷದ ಕಾರ್ಯಕ್ರಮಗಳಲ್ಲಿ ನಿಷ್ಠೆಯಿಂದ ಭಾಗವಹಿಸಿ, ಸಹಕರಿಸುತ್ತಿದ್ದರು.

ದ.ಕ. ಜಿಲ್ಲಾ ಹಂಚಿನ ಮಜೂರರ ಸಂಘದ ಬ್ರಾಂಚ್–ಕುಂದಾಪುರ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ತಾಲ್ಲೂಕು ಸಮಿತಿ ತೀವ್ರ ಸಂತಾಪ ವ್ಯಕ್ತಪಡಿಸುತ್ತವೆ; ಹಾಗೂ ಅವರ ಕುಟುಂಬದವರ ದುಃಖದಲ್ಲಿ ಸಹತಾಪ ವ್ಯಕ್ತಪಡಿಸುತ್ತವೆ.

○

## ಸಕ್ಕರೆ, ಸೀಮೆ ಎಣ್ಣೆ ಮತ್ತೆ ಮಾಯ

ದಾಂಡೇಲಿಯ ಜನತೆಗೆ ಸಕ್ಕರೆ, ಸೀಮೆಎಣ್ಣೆ ಮತ್ತಿತರ ಜೀವನಾವಶ್ಯಕ ವಸ್ತುಗಳ ಸರಿಯಾದ ವಿತರಣೆಗಾಗಿ ಸಿ. ಪಿ. ಐ. (ಎಂ) ಮತ್ತು ಸಿ. ಐ. ಟಿ. ಯು. ಸದಸ್ಯರು ಅನ್ನ ಸತ್ಯಾಗ್ರಹ ನಡೆಸಿದ ನಂತರ ಪೂರೈಕೆ ವ್ಯವಸ್ಥೆ ಉತ್ತಮಗೊಂಡಿತ್ತು. ಆದರೆ ಇದೀಗ ಮತ್ತೆ ನಗರದಲ್ಲಿ ಜೀವನಾವಶ್ಯಕ ವಸ್ತುಗಳು ಸಿಗುತ್ತಿಲ್ಲ, ನ್ಯಾಯ ಬೆಲೆ ಅಂಗಡಿಗಳಲ್ಲೂ ಸಿಗುತ್ತಿಲ್ಲ. ಇದರಿಂದ ಸಿಟ್ಟಿಗೆದ್ದ ಜನತೆ, ಕೂಡಲೇ ರೇಷನ್‌ಕಾರ್ಡ್ ಮೂಲಕ ಸಕ್ಕರೆ, ಸೀಮೆಎಣ್ಣೆ ಒದಗಿಸಬೇಕು, ರೇಷನ್ ಕಾರ್ಡ್ ಇಲ್ಲದವರಿಗೆ ರೇಷನ್‌ಕಾರ್ಡ್ ಕೊಡಬೇಕು, ಇಲ್ಲವಾದಲ್ಲಿ ದಾಂಡೇಲಿಯ ಜನತೆ ಹಾಗೂ ಸಿ. ಪಿ. ಐ. (ಎಂ) ನೇತೃತ್ವದ ಕಾರ್ಮಿಕರು ತೀವ್ರ ಹೋರಾಟ ನಡೆಸಬೇಕಾಗುತ್ತದೆಂದು ತಾ. 10-1-80 ರಂದು ಉ. ಕ. ಜಿಲ್ಲಾ ಜಿಲ್ಲಾಧಿಕಾರಿಗಳಿಗೆ ಸಹಸ್ರಾರು ಸಹಿಗಳಿರುವ ಮನವಿ ಪತ್ರವನ್ನು ಸಲ್ಲಿಸಲಾಗಿದೆ. ●

## ಮುಷ್ಕರ ನಿರತ ಕಾರ್ಮಿಕರ ಮೇಲೆ ಗೂಂಡಾಗಳ ದಾಳಿ

ಉತ್ತರ ಕನ್ನಡ ಜಿಲ್ಲೆಯ ಕಾಗದ ಕಾರ್ಖಾನೆಯ ಕಾರ್ಮಿಕರು ತಾ. 22-11-79 ರಿಂದ ಸಂಪಿನ ಮೇಲೆ ಇದ್ದು ಈ ಸಂಪು ಶಾಂತವಾಗಿ ನಡೆದು ಬಂದಿದೆ. ಆದಾಗ್ಯೂ ಆಡಳಿತವರ್ಗದವರು ತಾ. 9-1-80 ರ ಮುಂಜಾನೆ ಸುಮಾರು 6 ಘಂಟೆಗೆ 60 ಕ್ಕೂ ಹೆಚ್ಚು ಶಸ್ತ್ರಧಾರಿ ಗೂಂಡಾಗಳನ್ನು ಜಿಲ್ಲಾದ್ಯಂತ ಪ್ರತಿಬಂಧಕಾಜ್ಞೆ ಇದ್ದದ್ದನ್ನೂ ಉಲ್ಲಂಘಿಸಿ ಶಾಂತಿಭಂಗಕ್ಕೆ ಹವಣಿಸಿದರು. ಇದನ್ನು ಮನಗಂಡ ಮಹಿಳಾ ಮತ್ತು ಪುರುಷ ಕಾರ್ಮಿಕರು ಗೂಂಡಾಗಳ ವಿರುದ್ಧ ಯಶಸ್ವೀ ಹೋರಾಟ ನಡೆಸಿ ಅವರನ್ನು ಕಾರ್ಖಾನೆಯ ಆವರಣದಿಂದ ಹೊರಗೆ ದಬ್ಬಿದರು. ಇನ್ನು ಮುಂದೆ ಕಾರ್ಖಾನೆಯ ಆವರಣದೊಳಗೆ ಕಾಲಿಡದಂತೆ ಮಾಡಿ ಪೋಲೀಸರ ವಶಕ್ಕೆ ಒಪ್ಪಿಸಿದರು.

●

# ಕೇರಳ ವಿಧಾನಸಭಾ ಚುನಾವಣೆ

[ಒಂದನೇ ಪುಟದಿಂದ]

**ಪಕ್ಷಗಳ ಬಲಾಬಲ ಈ ರೀತಿ ಇದೆ:**

| | |
|---|---|
| ಸಿ.ಪಿ.ಐ(ಎಂ) | 35 |
| ಕಾಂಗ್ರೆಸ್(ಯು) | 21 |
| ಸಿ.ಪಿ.ಐ | 17 |
| ಕೇರಳ ಕಾಂಗ್ರೆಸ್ (ಮಣಿ) | 8 |
| ಆರ್.ಎಸ್.ಪಿ. | 6 |
| ಎ.ಐ.ಎಂ.ಎಲ್. | 5 |
| ಕೇರಳ ಕಾಂಗ್ರೆಸ್(ಪಿಳ್ಳೈ) | 1 |
| ಒಟ್ಟು | 93 |
| ಕಾಂಗ್ರೆಸ್(ಐ) | 17 |
| ಐ.ಯು.ಎಂ.ಎಲ್. | 14 |
| ಕೇರಳ ಕಾಂಗ್ರೆಸ್(ಜೋಸೆಫ್) | 6 |
| ಎನ್.ಡಿ.ಪಿ. | 3 |
| ಪಿ.ಎಸ್.ಪಿ. | 1 |
| ಒಟ್ಟು | 41 |
| ಜನತಾಪಕ್ಷ | 5 |
| ಪಕ್ಷೇತರ | 1 |
| ಒಟ್ಟು ಪ್ರಕಟಿತಸ್ಥಾನ | 140 |

ಮಾಜಿ ಮುಖ್ಯಮಂತ್ರಿಗಳಾದ ಸಿ. ಹೆಚ್. ಮೊಹಮ್ಮದ್ ಕೋಯಾ, ಕೆ. ಕರುಣಾಕರನ್, ಮತ್ತು ಪಿ. ಕೆ. ವಾಸುದೇವನ್‌ನಾಯರ್ ಮತ್ತೆ ವಿಧಾನಸಭೆಗೆ ಪುನರ್ ಆಯ್ಕೆಯಾಗಿದ್ದರೂ ಅವರ ಸಂಪುಟದ ಬಹಳಷ್ಟು ಸಹೋದ್ಯೋಗಿಗಳು ಪರಾಭವಗೊಂಡಿದ್ದಾರೆ. ಕಳೆದ ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದ ಸಿ. ಪಿ. ಐ(ಎಂ)ನ ಮುಖಂಡ ಕಾಂ. ಟಿ. ಕೆ. ರಾಮಕೃಷ್ಣ ಮತ್ತೆ ಆಯ್ಕೆಯಾಗಿದ್ದಾರೆ. ಸಿ.ಪಿ.ಐ(ಎಂ) ರಾಜ್ಯ ಸಮಿತಿಯ ಕಾರ್ಯದರ್ಶಿ ಕಾಂ. ಇ. ಕೆ. ನಯನಾರ್, ಜನತಾ ಪಕ್ಷದ ಕೆ. ರಾಜನ್‌ರವರನ್ನು 16 ಸಾವಿರ ಮತಗಳ ಅಂತರದಲ್ಲಿ ಸೋಲಿಸಿದ್ದಾರೆ. ಮತ್ತೊಬ್ಬ ಮಾರ್ಕ್ಸ್‌ವಾದಿ ನಾಯಕರಾದ ಮಾಜಿ ಕಂದಾಯ ಸಚಿವೆ ಶ್ರೀಮತಿ ಕೆ. ಆರ್. ಗೌರಿ ಅವರು ಆರೂರ್ ಕ್ಷೇತ್ರದಿಂದ ಕಾಂಗ್ರೆಸ್(ಐ) ಅಭ್ಯರ್ಥಿ ಟಿ.ಕೆ. ಸದಾನಂದ ಅವರನ್ನು 12,400 ಮತಗಳ ಅಂತರದಿಂದ ಸೋಲಿಸಿ ಆಯ್ಕೆಯಾಗಿದ್ದಾರೆ.

ಅಚ್ಯುತಮೆನನ್ ಸಂಪುಟದಲ್ಲಿ ಅರ್ಥ ಸಚಿವರಾಗಿದ್ದ ಕಾಂಗ್ರೆಸ್(ಐ)ನ ಶ್ರೀ ಕೆ. ಜಿ. ಅಡಿಯೋಡಿಯವರು ಸಿ.ಪಿ.ಐ. ಅಭ್ಯರ್ಥಿ ಶ್ರೀ ಕುಮಾರನ್‌ರಿಂದ ನಾಡಪುರಂ ಕ್ಷೇತ್ರದಲ್ಲಿ ಆರು ಸಾವಿರ ಮತಗಳ ಅಂತರದಲ್ಲಿ ಪರಾಭವಗೊಂಡಿದ್ದಾರೆ.

ಕೇರಳ ಚುನಾವಣೆಗಳಿಂದ ಮತ್ತೊಮ್ಮೆ ಸ್ಪಷ್ಟವಾಗಿರುವ ಅಂಶವೆಂದರೆ, ಎಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಒಂದಾಗಿ ಕಾಂಗ್ರೆಸ್ಸಿಗೆ ಪ್ರತಿಯಾದ ಪರ್ಯಾಯ ಪಕ್ಷವಾಗಿ ಜನತೆಯ ಮುಂದೆ ಬಂದಿವೆಯೋ ಅಲ್ಲಿ ಜನತೆ ಕಾಂಗ್ರೆಸ್ಸನ್ನು ತಿರಸ್ಕರಿಸಿವೆ. ಇಂದಿರಾಗಾಳಿ ಅಥವಾ ಪವಾಡವೆಂಬುದು ಸುಳ್ಳು. ಜನತೆಯ ಒಳಿತಿಗಾಗಿ ಸಾಮಾನ್ಯ ಕಾರ್ಯಕ್ರಮದ ಆಧಾರದ ಮೇಲೆ, ಜನಸಾಮಾನ್ಯರ ಮಧ್ಯೆ, ದುಡಿಯುವ ವರ್ಗದ ಮಧ್ಯೆ ಅವರ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಟ ಮಾಡಿದರೆ ಜನಬೆಂಬಲ ಸಿಗುವುದು ಖಂಡಿತವೆಂದು ಚುನಾವಣೆಗಳು ಸ್ಪಷ್ಟಪಡಿಸಿವೆ. ಕೇರಳದ ಜನತೆ ಜಾತಿ ರಾಜಕೀಯವನ್ನು ಸಹಾ ತಿರಸ್ಕರಿಸಿದ್ದಾರೆ. ಎಳವ ಸಂಸ್ಥೆಯ ರಾಜಕೀಯ ವಿಭಾಗವಾದ ಸೋಷಲಿಸ್ಟ್ ರಿಪಬ್ಲಿಕನ್ ಪಕ್ಷ, ಸಂಯುಕ್ತ ಪ್ರಜಾಸತ್ತಾತ್ಮಕ ರಂಗದ ಕೂಟ ಪಕ್ಷವಾಗಿ ವಿಧಾನಸಭಾ ಪ್ರವೇಶಕ್ಕೆ ನಡೆಸಿದ ಪ್ರಥಮ ಪ್ರಯತ್ನದಲ್ಲಿಯೇ ತಿರಸ್ಕರಿಸಲ್ಪಟ್ಟಿದೆ. ಯಾವ ರಾಜಕೀಯ ಸಿದ್ಧಾಂತ, ಕಾರ್ಯಕ್ರಮವಿಲ್ಲದ ಪಕ್ಷೇತರ ಅಭ್ಯರ್ಥಿಗಳನ್ನೂ, ಕೇರಳದ ಜನತೆ ತಿರಸ್ಕರಿಸಿದೆ. ಇಂದಿರಾ ಪೂಜೆ ಮಾಡಿಸಿದ ತಿರುವನಂತಪುರ ನಗರದ ಸ್ಥಾನ ಮತ್ತು ವರ್ಕಲ ಸ್ಥಾನಗಳು ವಾಮರಂಗದ ಅಭ್ಯರ್ಥಿಗಳ ಪಾಲಾಗಿವೆ. 'ಎಡ ಮತ್ತು ಪ್ರಜಾಸತ್ತಾತ್ಮಕ ರಂಗದ ಅಭ್ಯರ್ಥಿಗಳನ್ನು ತಿರಸ್ಕರಿಸಿ' ಎಂದು ಅನೇಕ ಬಿಷಪ್‌ಗಳು ಬಹಿರಂಗ ಸುತ್ತೋಲೆಗಳನ್ನು ಕಳಿಸಿದರೂ, ಕ್ರಿಶ್ಚಿಯನ್ ಮತದಾರರೇ ಅಧಿಕ ಸಂಖ್ಯೆಯಲ್ಲಿರುವ ಸೆಂಟ್ರಲ್ ತಿರುವಾಂಕೂರು ಪ್ರದೇಶದಲ್ಲಿ ಕಾಂಗ್ರೆಸ್ ನೇತೃತ್ವದ ಸಂಯುಕ್ತ ಪ್ರಜಾಸತ್ತಾತ್ಮಕ ರಂಗದ ಅಭ್ಯರ್ಥಿಗಳು ಸೋಲನ್ನು ಅನುಭವಿಸಿರುವುದು, ಕೇರಳದ ಜನತೆಯ ತೀಕ್ಷ್ಣ ರಾಜಕೀಯ ಪ್ರಜ್ಞೆಯನ್ನು ತೋರಿಸುತ್ತದೆ.

**ಜ್ಯೋತಿಬಸು ಅಭಿನಂದನೆ :**

ಎಡ ಮತ್ತು ಪ್ರಜಾಸತ್ತಾತ್ಮಕ ರಂಗಕ್ಕೆ ನಿಚ್ಚಳ ಬಹುಮತವನ್ನು ದೊರಕಿಸಿಕೊಟ್ಟ ಕೇರಳದ ಜನತೆಯನ್ನು ಪ. ಬಂಗಾಳದ ಮುಖ್ಯಮಂತ್ರಿ ಹಾಗೂ ಸಿ. ಪಿ. ಐ (ಎಂ) ಪೊಲಿಟ್‌ಬ್ಯೂರೋ ಸದಸ್ಯ ಕಾಂ. ಜ್ಯೋತಿಬಸು ಅಭಿನಂದಿಸಿದ್ದಾರೆ.

ಕೇರಳದ ಜನರು ರಾಜಕೀಯ ಪ್ರೌಢಿಮೆಯನ್ನೂ, ಬುದ್ಧಿಮತ್ತೆಯನ್ನೂ ಪ್ರದರ್ಶಿಸಿದ್ದಾರೆ ಎಂದಿರುವ ಕಾಂ. ಜ್ಯೋತಿಬಸು "ಕೇರಳ ಜನತೆಗೂ, ಎಡ ಮತ್ತು ಪ್ರಜಾಸತ್ತಾತ್ಮಕ ರಂಗಕ್ಕೂ ನನ್ನ ವಂದನೆಗಳು" ಎಂದು ಹೇಳಿದ್ದಾರೆ.

ಕೇರಳದ ಚುನಾವಣೆಗಳ ಸಮಯದಲ್ಲಿ ಕಾಂ. ಜ್ಯೋತಿಬಸು ಮತ್ತು ತ್ರಿಪುರಾ ರಾಜ್ಯದ ಮುಖ್ಯಮಂತ್ರಿ ಹಾಗೂ ಸಿ. ಪಿ. ಐ (ಎಂ) ಕೇಂದ್ರ ಸಮಿತಿ ಸದಸ್ಯ ಕಾಂ. ನೃಪೇನ್ ಚಕ್ರವರ್ತಿಯವರು ಮೂರು ದಿನಗಳ ಕಾಲ ರಾಜ್ಯದಲ್ಲಿ ಎಡ ಹಾಗೂ ಪ್ರಜಾಸತ್ತಾತ್ಮಕ ರಂಗದ ಅಭ್ಯರ್ಥಿಗಳ ಪರವಾಗಿ ಚುನಾವಣಾ ಪ್ರಚಾರ ಕೈಗೊಂಡಿದ್ದನ್ನು ಇಲ್ಲಿ ನೆನೆಯಬಹುದು.

ತಾ॥ 24ರಂದು ಎಡ ಪ್ರಜಾಸತ್ತಾತ್ಮಕ ರಂಗದ ಶಾಸಕಾಂಗ ಪಕ್ಷಗಳು ಸಭೆ ಸೇರಿ, ಸಿ.ಪಿ.ಐ(ಎಂ)ನ ಕೇಂದ್ರ ಸಮಿತಿ ಸಭೆ ಸೇರಿ ಕೇರಳ ರಾಜ್ಯ ಸಮಿತಿಯ ಕಾರ್ಯದರ್ಶಿ ಕಾ. ಇ. ಕೆ. ನಯನಾರ್‌ರವರನ್ನು ಶಾಸಕಾಂಗ ಪಕ್ಷದ ನಾಯಕರನ್ನಾಗಿ ಸರ್ವಾನುಮತದಿಂದ ಚುನಾಯಿಸಿದವು. ಅವರ ಸಚಿವ ಸಂಪುಟವು ತಾ॥ 25ರಂದು ಪ್ರಮಾಣವಚನ ಸ್ವೀಕರಿಸಿತು.
[ತಾ॥ 25-1-80] ●

# ಕೇರಳದ ಜನತೆಗೆ ಕೆಂಪು ವಂದನೆಗಳು

[ಒಂದನೇ ಪುಟದಿಂದ]

ತ್ವದ ಎಡ ಮತ್ತು ಪ್ರಜಾಸತ್ತಾತ್ಮಕ ರಂಗ ಲೋಕಸಭೆಯ ಬಹುಪಾಲು ಸ್ಥಾನಗಳನ್ನು ಉಳಿಸಿಕೊಂಡಿತು. ಈಗ ವಿಧಾನಸಭಾ ಚುನಾವಣೆಗಳು ಮತ್ತೊಮ್ಮೆ ಇಡೀ ದೇಶದಲ್ಲಿ ಕಾಂಗ್ರೆಸ್ (ಐ)ಗೆ ಪ್ರತಿಯಾದ ಪರ್ಯಾಯ ಶಕ್ತಿಯಾಗಿ ಕೇವಲ ಎಡ ಪಕ್ಷಗಳು ಮಾತ್ರ ನೇತೃತ್ವ ಕೊಡಬಲ್ಲವು ಎಂಬುದನ್ನು ತೋರಿಸಿವೆ.

ಕರ್ನಾಟಕದಲ್ಲಿ ಕಾಂಗ್ರೆಸ್ಸಿಗೆ ಪ್ರಬಲ ವಿರೋಧ ಪಕ್ಷವಾಗಿ ಕೆಲಸಮಾಡಲು, ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಮಧ್ಯೆ ಪರಸ್ಪರ ಅರಿವು ಮತ್ತು ಐಕ್ಯತೆ ಬೆಳೆಯುವುದು ಅವಶ್ಯವೆಂದು ಕಾರ್ಯದರ್ಶಿಗಳು ತಿಳಿಸಿದ್ದಾರೆ. ಇದರಿಂದ ಮಾತ್ರ ರಾಜ್ಯದಲ್ಲಿ ದುಡಿಯುವ ಜನತೆಯ ಸಮಸ್ಯೆಗಳ ಪರಿಹಾರಕ್ಕಾಗಿ ಸಾಮೂಹಿಕ ಚಳುವಳಿಗಳನ್ನು ಉಳಿಸಿ ಬೆಳೆಸಬಹುದೆಂದು ಹೇಳಿಕೆ ತಿಳಿಸಿದೆ. ಈ ಬಗ್ಗೆ ರಾಜ್ಯಮಟ್ಟದಲ್ಲಿ ವ್ಯಾಪಕ ಕಾರ್ಯಕ್ರಮವನ್ನು ಹಾಕಲು ಹಾಗೂ ವಿವಿಧ ಪಕ್ಷಗಳ ಜೊತೆ ಸಮಾಲೋಚಿಸಲು ತಾ. 30-1-80, 31-1-80 ಮತ್ತು 1-2-80ರಂದು ದಾಂಡೇಲಿಯಲ್ಲಿ ಸಭೆ ಸೇರುವ ರಾಜ್ಯ ಸಮಿತಿ ನಿರ್ಧರಿಸುವುದೆಂದು ಹೇಳಿದ್ದಾರೆ.

**ಗುಲ್ಬರ್ಗಾ ಲೋಕಸಭಾ ಚುನಾವಣೆ**

ಸಿ. ಎಂ. ಸ್ಟೀಫನ್‌ರಿಗೆ ಲೋಕಸಭೆಯಲ್ಲಿ ಜಾಗ ಮಾಡಿಕೊಡುವ ಉದ್ದೇಶದಿಂದ ಗುಲ್ಬರ್ಗಾ ಲೋಕಸಭಾ ಕ್ಷೇತ್ರಕ್ಕೆ ಮುಂದಿನ ತಿಂಗಳು 24ರಂದು ಮತ್ತೆ ಚುನಾವಣೆ ನಡೆಯಲಿದೆ. ಈ ಸಂದರ್ಭದಲ್ಲಿ ರಾಜ್ಯದ ಎಲ್ಲಾ ವಿರೋಧ ಪಕ್ಷಗಳು ಸಮಾಲೋಚನೆ ನಡೆಸಿ ಎಲ್ಲರಿಗೂ ಒಪ್ಪಿಗೆಯಾಗುವ ಸಾಮಾನ್ಯ ಅಭ್ಯರ್ಥಿಯನ್ನು ನಿಲ್ಲಿಸುವುದರ ಮೂಲಕ ಸರ್ವಾಧಿಕಾರಿ ವಿರೋಧಿ ಹೋರಾಟಕ್ಕೆ ಎಲ್ಲರೂ ಸಹಕರಿಸಬೇಕೆಂದು ಕಾಂ. ಎಂ. ಕೆ. ಭಟ್ ವಿನಂತಿಸಿದ್ದಾರೆ. ○

# ಸಂಪಾದಕೀಯ

[ಒಂದನೇ ಪುಟದಿಂದ]

ಕಳುಹಿಸಿಕೊಟ್ಟಿವೆ. ಈ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಎಸ್. ಬಂಗಾರಪ್ಪನವರದೂ ಈ ನಿಲುಮೆಯೇ ಆಗಿದೆ. ಮೇ ತಿಂಗಳಲ್ಲಿ ವಿಧಾನಸಭೆಗೆಚುನಾವಣೆ ನಡೆಯುವುದೆಂಬ ವದಂತಿಯೂ ಇದೆ. ಕಾಂಗ್ರೆಸ್ (ಐ) ಪಕ್ಷದ ಶಾಸಕರ ಸಭೆಯಲ್ಲಿ ದಿನಾಂಕ 23 ರಂದು ಮಾತನಾಡುತ್ತಾ ಮುಖ್ಯಮಂತ್ರಿ ಆರ್. ಗುಂಡೂರಾವ್‌ರವರು "ಇಂದಿರಾ ಕಾಂಗ್ರೆಸ್‌ನಲ್ಲಿ ಹೊಸ ಸದಸ್ಯರು ಹಳೆಯ ಸದಸ್ಯರು ಎನ್ನುವ ಬೇಧವಿಲ್ಲ. ಎಲ್ಲರೂ (ಜನತಾಪಕ್ಷದಿಂದ ಬಂದ ಕೆಲವರನ್ನುಳಿದು)ಹಿಂದೆ ಇಂದಿರಾ ಕಾಂಗ್ರೆಸ್ ಪರವಾಗಿಯೇ ಆರಿಸಿ ಬಂದವರು. ಮೂಲ ಪಕ್ಷಕ್ಕೇ ಈಗ ಅವರೆಲ್ಲಾ ಹಿಂತಿರುಗಿದ್ದಾರೆ" ಎಂದು ಹೇಳಿದ್ದಾರೆ. ಹೀಗಿರುವಾಗ ಹೊಸ ಸಚಿವ ಸಂಪುಟಕ್ಕೆ ರಾಜ್ಯದ ಅಗತ್ಯಗಳು ಜನತೆಯ ಸಂಕಷ್ಟಗಳ ಬಗ್ಗೆ ಆಳವಾಗಿ ವಿಚಾರಮಾಡಿ ಒಂದು ಸ್ಪಷ್ಟವಾದ ಧೋರಣೆಯನ್ನು ರೂಪಿಸಲು ಹೇಗೆ ಸಾಧ್ಯ? ಆದ್ದರಿಂದ ರಾಜ್ಯಪಾಲರ ಭಾಷಣ ತುಂಬಾ ಚಿಕ್ಕದಾಗಿರುವುದು ಸಹಜವಾಗಿಯೇ ಇದೆ.

ಮುಖ್ಯಮಂತ್ರಿಯೂ ಸೇರಿದಂತೆ ಮೂವರು ಸಚಿವರು ದೇವರಾಜ ಅರಸರ ಸಚಿವ ಸಂಪುಟದಲ್ಲಿ ಇದ್ದವರು (ವೀರಪ್ಪ ಮೊಯ್ಲಿಯವರು 72ರಿಂದ 78ರವರೆಗೆ) ಎಂಬುದನ್ನು ಗಮನದಲ್ಲಿಟ್ಟು, ರಾಜ್ಯಪಾಲರ ಭಾಷಣದಲ್ಲಿರುವ ಆಶ್ವಾಸನೆಗಳನ್ನು ಯಾವರೀತಿ ಎಷ್ಟರಮಟ್ಟಿಗೆ ಗುಂಡೂರಾವ್ ಸರ್ಕಾರವು ಈಡೇರಿಸುತ್ತದೆ ಎಂಬುದನ್ನು ಕಾದು ನೋಡಬೇಕಷ್ಟೆ. ಹಿಂದೆ ಇದ್ದವರು ಎಂಬುದನ್ನು ಗಮನದಲ್ಲಿಟ್ಟು ರಾಜ್ಯಪಾಲರ ಭಾಷಣದಲ್ಲಿರುವ ಆಶ್ವಾಸನೆಗಳನ್ನು ಯಾವರೀತಿ, ಎಷ್ಟರಮಟ್ಟಿಗೆ ಈ ಸರ್ಕಾರವು ಈಡೇರಿಸುತ್ತದೆ ಎಂಬುದನ್ನು ಕಾದುನೋಡಬೇಕಷ್ಟೆ. ○

# ಚುನಾವಣಾ ಫಲಿತಾಂಶ ಮತ್ತು ನಮ್ಮ ಜವಾಬ್ದಾರಿ

(2ನೇ ಪುಟದಿಂದ)

ಇಂದಿರಾ ಕಾಂಗ್ರೆಸ್‌ನ ಬಂಡವಾಳಶಾಹಿ ನೀತಿಯ ದಿವಾಳಿಕೋರತನವನ್ನು ವಿವರಿಸುತ್ತಾ, "ಬೂರ್ಜ್ವಾ ಆಡಳಿತವು ದೇಶದಲ್ಲಿ ತೀವ್ರವಾದ ತುರ್ತು ಆರ್ಥಿಕ-ಸಾಮಾಜಿಕ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲ, ಏಕೆಂದರೆ ಇಂದಿರಾಗಾಂಧಿಯವರು ಬಂಡವಾಳಶಾಹಿ ಪದ್ಧತಿಯನ್ನೇ ಮುಂದುವರಿಸುವುದರಿಂದ ಅದರ ಪರಿಣಾಮಗಳಾದ ಹಣದುಬ್ಬರ, ಬೆಲೆ ಏರಿಕೆ, ನಿರುದ್ಯೋಗ ಮತ್ತು ಭೂಮಿಯ ಪ್ರಶ್ನೆಗಳು ಮುಂತಾದವು ಹಾಗೆಯೇ ಉಳಿಯುತ್ತವೆ."

ಈ ಅಪಾಯವನ್ನು ಎದುರಿಸಲು ಸಿ.ಪಿ.ಐ. ಮುಂದಿಟ್ಟಿರುವ ಸಲಹೆ "ನಮ್ಮ ಗುರಿಯು ಎಡಪಕ್ಷಗಳ ಕಾರ್ಯಕರ್ತರ ಮಧ್ಯೆ ಬೆಳೆದಿರುವ ಮೈತ್ರಿಯನ್ನು ಉಳಿಸಿ ಬೆಳೆಸಬೇಕಾಗಿದೆಯಲ್ಲದೆ, ದುಡಿಯುವ ಜನತೆಯ ಮಧ್ಯ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳ ಮಧ್ಯೆ ನಮ್ಮ ಸಂಬಂಧಗಳನ್ನು ಮತ್ತಷ್ಟು ಬಲಗೊಳಿಸಬೇಕು."

ಎಡ ಮತ್ತು ಪ್ರಜಾಸತ್ತಾತ್ಮಕ ಪರ್ಯಾಯದ ಬಗ್ಗೆ ತಿಳಿಸುತ್ತಾ, ಅಂತಹ ಒಂದು ರಾಷ್ಟ್ರೀಯ ಪರ್ಯಾಯ ಮಾತ್ರ ದೇಶದಲ್ಲಿ ಬೂರ್ಜ್ವಾ ಪಕ್ಷಗಳ ಪೈಕಿ ಯಾವುದನ್ನು ಆರಿಸಿಕೊಳ್ಳಬೇಕೆಂಬ ಜನರ ಸಮಸ್ಯೆಯನ್ನು ಬಗೆಹರಿಸಬಲ್ಲದು. ಇದರಿಂದ ಮಾತ್ರ ದಿವಾಳಿಕೋರ ಬಂಡವಾಳಶಾಹಿ ಹಾದಿಯಿಂದ ದೇಶವನ್ನು ಉಳಿಸಬಹುದು.

(ಮುಂದುವರೆಯುವುದು)

# ಸಿ. ಐ. ಟಿ. ಯು. ಕರ್ನಾಟಕ ರಾಜ್ಯ ಸಮಿತಿಯ ಸದಸ್ಯರ ಗಮನಕ್ಕೆ

ತಾ॥ 20-1-80ರ ಐಕ್ಯರಂಗ ಪತ್ರಿಕೆಯಲ್ಲಿ ದಾಂಡೇಲಿಯಲ್ಲಿ ತಾ॥2-2-80 ರಂದು ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಸಮಿತಿಯ ಸಭೆಯು ನಡೆಯುವುದೆಂದು ತಪ್ಪಾಗಿ ಪ್ರಕಟವಾಗಿತ್ತು.

ಅಂದು ದಾಂಡೇಲಿಯಲ್ಲಿ ನಡೆಯುವುದು ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಮಂಡಳಿಯ ಪದಾಧಿಕಾರಿಗಳ ಸಭೆ. ಈ ಸಭೆಯು ರಾಜ್ಯ ಸಮಿತಿಯು ಸಭೆ ನಡೆಯುವ ಸ್ಥಳ ಮತ್ತು ತಾರೀಖನ್ನು ನಿರ್ಣಯಿಸಲಿದೆ.

ಸಭೆಯ ತಾರೀಖು ಮತ್ತು ಸ್ಥಳ ನಿರ್ಣಯವಾದ ನಂತರ ರಾಜ್ಯ ಸಮಿತಿಯ ಸದಸ್ಯರಿಗೆಲ್ಲಾ ಸುತ್ತೋಲೆಯನ್ನು ಕಳುಹಿಸಲಾಗುವುದು.

ಸಿ. ನಂಜುಂಡಪ್ಪ
ಸಿ.ಐ.ಟಿ.ಯು., ಪ್ರಧಾನ ಕಾರ್ಯದರ್ಶಿ

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist), Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT